ಬೆಲೆ ರೂ.2.50
D.O.P - 15th of every month at Udupi Sorting Office

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.

Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ – 15 ಅಕ್ಟೋಬರ್ 2015

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-15 ಸಂಚಿಕೆ-10 ಪುಟಗಳು-10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಗುರು ಸಂದೇಶ : ಐಕ್ಯತೆ ಹಾಗೂ ಭಕ್ತಿ

ತಾ.13-09-2015ರ ಗಣೇಶಚತುರ್ಥಿಯ ಹಿಂದಿನ ಆದಿತ್ಯವಾರ ಶೃಂಗೇರಿಯ ಶ್ರೀ ಶಾರದಾ ಮಹಾಸಂಸ್ಥಾನದಲ್ಲಿ ಸಮಾರಂಭದ ಕಳೆಯಿತ್ತು. ಸ್ವಾಗತ ಗೋಪುರದ ಬಳಿ, ಶ್ರೀ ಶಾರದಾ ದೇವಸ್ಥಾನದಲ್ಲಿ, ನದಿದಂಡೆಯಲ್ಲಿ, ನರಸಿಂಹ ವನದಲ್ಲಿ ಶುಭ್ರ ಶ್ವೇತವಸ್ತ್ರದ ಪಂಚೆ ಧರಿಸಿ ಮೇಲೊಂದು ಶಾಲುಹೊದ್ದು, ವಿಭೂತಿಧಾರಿಗಳಾಗಿ, ಕೆಲವರು ಅರ್ಧಾಂಗಿ ಸಮೇತರಾಗಿ ಕಂಗೊಳಿಸುತ್ತಾ ಎಲ್ಲೆಲ್ಲಿಯೂ ನಮ್ಮವರೇ ಕಾಣಸಿಗುತ್ತಿದ್ದರು. ಕಾರಣ ಅಂದು ಸ್ಥಾನಿಕ ಬ್ರಾಹ್ಮಣರು ಚಾತುರ್ಮಾಸ್ಯದಲ್ಲಿ ನಿರತರಾಗಿರುವ ಶೃಂಗೇರಿಯ ಶ್ರೀ ಶ್ರೀ ಗಳನ್ನು ಭೇಟಿಯಾಗಿ ಆಶೀರ್ವಾದ ಪಡೆಯಲು ಬರುವ ದಿನ. ಅಂತೆಯೇ ದೇಶದ ಎಲ್ಲೆಡೆಗಳಿಂದ ಸ್ಥಾನಿಕ ಬ್ರಾಹ್ಮಣರು ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿದ್ದರು. ನೆರೆದ ಸಮಾಜ ಬಾಂಧವರು ದೂರದೂರಿನ ಬಂಧುಮಿತ್ರರನ್ನು ಗುರುತಿಸಿ




ಸುಖದುಃಖಗಳನ್ನು ವಿನಿಮಯ ಮಾಡಿಕೊಳ್ಳುತ್ತಿರುವ ದೃಶ್ಯ ಸಾಮಾನ್ಯವಾಗಿತ್ತು.

ಅಂದು ಶ್ರೀ ಶ್ರೀಯವರು ತಮ್ಮ ಶಿಷ್ಯರೊಂದಿಗೆ ಬೆಳಿಗ್ಗೆಯಿಂದಲೇ ನರಸಿಂಹವನದಲ್ಲಿರುವ ಗುರುಭವನದಲ್ಲಿ ದರ್ಶನ ನೀಡಲು ಆರಂಭಿಸಿದ್ದರು. ಪಾದಪೂಜೆ, ಭಿಕ್ಷಾವಂದನೆ, ಭೇಟಿ, ಕುಶಲೋಪರಿ ಮಾತುಕತೆಗಳೊಂದಿಗೆ ಶ್ರೀ ಶ್ರೀಗಳು ಸರತಿಯ ಸಾಲಿನಲ್ಲಿ ಬಂದ ಪ್ರತಿಯೊಬ್ಬರಿಗೂ ಫಲಮಂತ್ರಾಕ್ಷತೆಯಿತ್ತು ಆಶೀರ್ವದಿಸಿದರು. ಮಧ್ಯಾಹ್ನ ಸುಮಾರು ಹನ್ನೆರಡು ಗಂಟೆಯ ಹೊತ್ತಿಗೆ ಪಟ್ಟದ ಶ್ರೀ ಚಂದ್ರಮೌಳೀಶ್ವರ ದೇವರಿಗೆ ಮಹಾಪೂಜೆಯಾದ ಬಳಿಕ ಶ್ರೀ ಕ್ಷೇತ್ರದ ಧರ್ಮಾಧಿಕಾರಿಗಳಾದ ಶ್ರೀ ಸತ್ಯಶಂಕರ ಬೊಳ್ಳಾವರ ನೇತೃತ್ವದಲ್ಲಿ ವಿವಿಧ ಸಂಘಗಳ ಪದಾಧಿಕಾರಿಗಳು ಶ್ರೀ ಶ್ರೀಗಳ ಮುಂದೆ ನೆರೆದು ನಿಂತು ಪ್ರಾರ್ಥಿಸಿ, ಶ್ರೀ ಶ್ರೀ ಗಳಿಗೆ ಸಮಷ್ಟಿಭಿಕ್ಷೆ ಅರ್ಪಿಸಿದರು. ನಂತರ ಶ್ರೀ ಶ್ರೀಗಳು ಮುಂಬಯಿ, ಬೆಂಗಳೂರು, ಮೈಸೂರು, ಮಂಗಳೂರು, ಸುರತ್ಕಲ್, ಪಾವಂಜೆ, ಪಡುಬಿದ್ರಿ, ಉಡುಪಿ ಕುಂದಾಪುರ, ಕಾರ್ಕಳ, ಮೂಡುಬಿದ್ರಿ, ಬೆಳ್ತಂಗಡಿ, ಸುಳ್ಯ, ಪುತ್ತೂರು, ಕಡಬ, ಮೂಲ್ಕಿಯಿಂದ ಆಗಮಿಸಿದ್ದ ಸುಮಾರು ಎರಡುವರೆ ಸಾವಿರದಷ್ಟು ಜನರನ್ನು ಉದ್ದೇಶಿಸಿ ಆಶೀರ್ವಚನ ನೀಡಿದರು.

ನನ್ನ ಪ್ರೀತಿಯ ಶಿಷ್ಯರಾದ ಸ್ಥಾನಿಕ ಬ್ರಾಹ್ಮಣ ಬಾಂಧವರೇ ಎಂದು ಪ್ರೀತಿಯಿಂದ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರು ಆಶೀರ್ವಚನ ಆರಂಭಿಸಿದರು. ಶ್ರೀ ಶಂಕರಾಚಾರ್ಯರು ಹಿಂದೂ ಧರ್ಮಕ್ಕೆ ಹಾಗೂ ಈ ಅಖಂಡ ಭಾರತಕ್ಕೆ ಸಲ್ಲಿಸಿದ ಸೇವೆಯನ್ನು ಹಾಗೂ ಶ್ರೀ ತೋಟಕಾಚಾರ್ಯರ ಅಮೋಘ ಗುರುಭಕ್ತಿಯನ್ನು ಉದಾಹರಿಸಿ ಸ್ಥಾನಿಕ ಬ್ರಾಹ್ಮಣರು ಶ್ರೀ ಸಂಸ್ಥಾನದ ಮೇಲಿಟ್ಟಿರುವ ಗೌರವ ಭಕ್ತಿಗಳನ್ನು ಕೊಂಡಾಡಿದರು ಹಾಗೂ ಈ ಪರಂಪರೆಯು ಇನ್ನು ಮುಂದೆಯೂ ಹೀಗೆಯೇ ಮುಂದುವರೆಯತಕ್ಕದ್ದೆಂದು ಅನುಗ್ರಹಿಸಿದರು. ಸಂಖ್ಯಾಬಲವು ಅತಿಮುಖ್ಯವಾದದ್ದು. ಯಾವುದೇ ಸಂದರ್ಭದಲ್ಲೂ ಸಮಾಜದ ಎಲ್ಲಾ ಜನರು ಒಗ್ಗಟ್ಟಾಗಿದ್ದು ಏಕಾಭಿಪ್ರಾಯದಿಂದ ಕೆಲಸಮಾಡಿ ಸಮಾಜದ ಉನ್ನತಿ ಸಾಧಿಸಬೇಕೆಂಬ ಕಿವಿಮಾತನ್ನೂ ಇಲ್ಲಿ ಹೇಳಿದರು. ಗುರು ಹಾಗೂ ಈಶ್ವರ ಭಕ್ತಿ ಹಾಗೂ ಐಕ್ಯತೆಯೊಂದಿಗೆ ಉನ್ನತಿಯನ್ನು ಸಾಧಿಸಿರಿ ಎಂದು ಆಶೀರ್ವದಿಸಿದರು.

ಸುಮಾರು ಎರಡು ಗಂಟೆಯ ಹೊತ್ತಿಗೆ ಗುರುಭೇಟಿಯ ಕಾರ್ಯಕ್ರಮ ಮುಕ್ತಾಯವಾಯಿತು. ಅನಂತರ ಎಲ್ಲರೂ ತಮಗಾಗಿ ಭೋಜನಗೃಹದಲ್ಲಿ ಏರ್ಪಡಿಸಿದ್ದ ಪ್ರಸಾದ ಭೋಜನವನ್ನು ಸ್ವೀಕರಿಸಿ, ತಮ್ಮೂರಿಗೆ ಧನ್ಯತಾ ಭಾವನೆಯೊಂದಿಗೆ ಮರಳಿದರು.

**ಫೋಟೋ ಕೃಪೆ : ಶ್ರೀ ರಘುವೀರ್ ಪೆರ್ಡೂರು**

## ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.), ಉಡುಪಿ-ವಾರ್ಷಿಕ ಮಹಾಸಭೆ



ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.), ಉಡುಪಿ ಇದರ 2014-15ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.06-09-2015ನೇ ರವಿವಾರ ಬೆಳಿಗ್ಗೆ ಸೊಸೈಟಿಯ ಕಛೇರಿ ಇರುವ ಭೂವರಾಹ ಸಂಕೀರ್ಣದ ಸಭಾಂಗಣದಲ್ಲಿ ನಡೆಯಿತು. ಸೊಸೈಟಿಯ ಅಧ್ಯಕ್ಷರಾದ ಎಮ್.ಸದಾನಂದ ರಾಯರ ಅಧ್ಯಕ್ಷತೆಯಲ್ಲಿ ನಡೆದ ಸಭೆ ಶ್ರೀಮತಿ ಭಾರತಿಯವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು.

ಸದಸ್ಯರನ್ನು ಆತ್ಮೀಯವಾಗಿ ಸ್ವಾಗತಿಸಿದ ಅಧ್ಯಕ್ಷರು "ಸತತವಾಗಿ 12ನೇ ವರ್ಷದಲ್ಲಿ ಲಾಭಗಳಿಸುತ್ತಾ ಬಂದಿರುವ ಸಂಸ್ಥೆ ಮುಂದಿನ ವರ್ಷದಲ್ಲೂ ಲಾಭಗಳಿಸುವ ಹಾದಿಯಲ್ಲಿ ಮುನ್ನಡೆಯುತ್ತಿದೆ. ಕೇಂದ್ರ ಕಛೇರಿ, ಕುಕ್ಕಿಕಟ್ಟೆ ಶಾಖೆ, ಪಡುಬಿದ್ರಿ ಶಾಖೆ ಮತ್ತು ಕೋಟೇಶ್ವರ ಶಾಖೆಯು ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿದ್ದು, ಉತ್ತಮ ಪ್ರಗತಿ ನಿರೀಕ್ಷೆಯಲ್ಲಿದ್ದೇವೆ" ಎಂದರು.

ಸಂಘವು ವರದಿ ಸಾಲಿನ ಅಂತ್ಯಕ್ಕೆ ಸದಸ್ಯರಿಂದ ರೂ.20.32 ಲಕ್ಷ ಪಾಲು ಬಂಡವಾಳ ಹಾಗೂ ರೂ.9.49 ಕೋಟಿ ಠೇವಣಿ ಸಂಗ್ರಹಿಸಿದೆ. ರೂ.6.54 ಕೋಟಿ ಸಾಲ ನೀಡಿದ್ದು, ರೂ.7.46 ಲಕ್ಷ ನಿವ್ವಳ ಲಾಭಗಳಿಸಿದೆ. ಪ್ರಸಕ್ತ ಸಂಘವು ರೂ.10.04 ಕೋಟಿ ದುಡಿಯುವ ಬಂಡವಾಳ ಹೊಂದಿದ್ದು, ಸಂಘದ ಸದಸ್ಯರಿಗೆ ಶೇ.12 ಡಿವಿಡೆಂಡ್ ಘೋಷಿಸುತ್ತಿದ್ದೇವೆ ಎಂದೂ ಅವರು ಸಂಘದ ಅಭಿವೃದ್ಧಿಗೆ ಸಹಕರಿಸಿದ ಸದಸ್ಯ ಬಾಂಧವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

2014-15ನೇ ಸಾಲಿನ ವಾರ್ಷಿಕ ವರದಿ ಸಭೆಯಲ್ಲಿ ಅಂಗೀಕರಿಸಲ್ಪಟ್ಟ ನಂತರ 2014-15ನೇ ಸಾಲಿನ ಪರಿಶೋಧಿತ ಲಾಭ-ನಷ್ಟದ ತಃಖ್ತೆ, ಹಾಗೂ ಆಸ್ತಿ-ಜವಾಬ್ದಾರಿ ತಃಖ್ತೆಗಳನ್ನು ಕಾರ್ಯದರ್ಶಿ ಎನ್. ಪಟ್ಟಾಭಿರಾಮರಾವ್‌ರವರು ಸಭೆಯ ಮುಂದಿಟ್ಟರು.

ಲೆಕ್ಕಪತ್ರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಸಭೆಯು ಕೆಲವು ವಿಷಯಗಳಿಗೆ ಸಮಾಧಾನಕರ ವಿವರಗಳನ್ನು ಪಡೆದು ತನ್ನ ಅಂಗೀಕಾರವನ್ನು ನೀಡಿತು. 2014-15ನೇ ಸಾಲಿನ ಅಂದಾಜು ಆಯ-ವ್ಯಯ ತಃಖ್ತೆಗಿಂತ ಹೆಚ್ಚಾದ ವೆಚ್ಚಗಳನ್ನು ಪರಿಶೀಲನೆ ಮಾಡಿ ಸಭೆಯು ಅಂಗೀಕರಿಸಿತು. 2014-15ನೇ ಸಾಲಿನ ನಿವ್ವಳ ಲಾಭದ ಹಂಚಿಕೆ ಮತ್ತು 2015-16ನೇ ಸಾಲಿನ ಅಂದಾಜು ಆಯ-ವ್ಯಯ ಪಟ್ಟಿಯನ್ನು ಸಭೆಯು ಅನುಮೋದಿಸಿತು. ಸಂಘದ ಸದಸ್ಯರಿಗೆ ಶೇ.12 ಲಾಭಾಂಶ ನೀಡುವರೇ ಹಾಗೂ ಸಿಬ್ಬಂದಿ ವರ್ಗಕ್ಕೆ ಶೇ.10 ಬೋನಸ್ಸು ನೀಡುವರೇ ಆಡಳಿತ ಮಂಡಳಿಯು ಮಾಡಿದ ಶಿಫಾರಸ್ಸನ್ನು ಮಹಾಸಭೆಯು ಅನುಮೋದಿಸಿತು. 2015-16ನೇ ಸಾಲಿಗೆ ಲೆಕ್ಕಪರಿಶೋಧಕರನ್ನಾಗಿ ಕೆ. ರಮೇಶ್‌ರಾವ್, ಕಾರ್ಕಳ ಇವರನ್ನು ನೇಮಕ ಮಾಡುವರೇ ಆಡಳಿತ ಮಂಡಳಿಯ ಶಿಫಾರಸ್ಸನ್ನು ಸಭೆಯು ಅನುಮೋದಿಸಿತು. ಉಪನಿಬಂಧನೆಗಳಿಗೆ ಸೂಚಿಸಲಾದ ತಿದ್ದುಪಡಿಯ ಪ್ರಸ್ತಾಪವನ್ನು ಸಭೆಯು ಅಂಗೀಕರಿಸಿತು.

ವೇದಿಕೆಯಲ್ಲಿ ಉಪಾಧ್ಯಕ್ಷರಾದ ಕೆ. ವೇಣುಗೋಪಾಲರಾವ್, ನಿರ್ದೇಶಕರಾದ ಯು.ಪ್ರಫುಲ್ಲಚಂದ್ರ ರಾವ್, ಯು.ಅರವಿಂದ ಕುಮಾರ್, ವೈ.ಪ್ರಕಾಶ್ ಕುಮಾರ್, ಕೆ. ಮಂಜುನಾಥ್ ಹೆಬ್ಬಾರ್, ಶ್ರೀಮತಿ ಗೀತಾ ಕೆ.ರಾವ್, ಕೋಟೇಶ್ವರ ಶಾಖಾ ಸಲಹೆಗಾರರಾದ ಗಣೇಶ್ ರಾವ್ ಉಪಸ್ಥಿತರಿದ್ದರು.

ಶಾಖಾ ವ್ಯವಸ್ಥಾಪಕರಾದ ಕೆ. ವಿಶ್ವನಾಥ್‌ರಾವ್‌ರವರ ಧನ್ಯವಾದ ಸಮರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು. ಕೊನೆಯಲ್ಲಿ ಸದಸ್ಯರೆಲ್ಲರೂ ಮಧ್ಯಾಹ್ನದ ಭೋಜನವನ್ನು ಸ್ವೀಕರಿಸಿದರು.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.



॥ ನಮೋ ದೇವ್ಯೈ ಮಹಾದೇವ್ಯೈ ಶಿವಾಯ್ಯೈ ಸತತಂ ನಮಃ ॥

**ಆಮಂತ್ರಣ**

ಮಾನ್ಯ ಸಮಾಜ ಬಾಂಧವರೇ,

ಸ್ವಸ್ತಿ! ಶ್ರೀ ಮನ್ಮಥ ನಾಮ ಸಂವತ್ಸರದ ತುಲಾ ಮಾಸ ದಿನ ೫ ಸಲುವ ಅಶ್ವಯುಜ ಶುದ (ನವಮಿ) ೯ ಯು, ತಾ.22-10-2015ನೇ ಗುರುವಾರ

**ವಿಜಯದಶಮಿ ದಿನದಂದು**

**ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ**

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಪೂರ್ವಾಹ್ನ ಮತ್ತು ಅಪರಾಹ್ನದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

ವೈ. ಭುವನೇಂದ್ರ ರಾವ್
ಅಧ್ಯಕ್ಷರು

ಕೆ. ಸುರೇಶ್ ರಾವ್
ಕಾರ್ಯದರ್ಶಿ

ಹಾಗೂ ಆಡಳಿತ ಮಂಡಳಿಯ ಸವಿನಯ ಆಮಂತ್ರಣ

# ಸಂಪಾದಕೀಯ.....

ಇದೀಗ ನವರಾತ್ರಿಯ ಸಡಗರ. ಈ ಒಂಬತ್ತು ದಿನಗಳು ದೇವಿಯ ಉಪಾಸನೆಗೆ ಮೀಸಲಾದ ದಿನಗಳು. ನಮ್ಮ ದೇಶದಲ್ಲಿ ದೇವಿಯನ್ನು ಶಕ್ತಿಯ ಪ್ರತೀಕವಾಗಿ ಪೂಜಿಸುತ್ತಾರೆ. ಈ ಕ್ರಮವು ವೇದಕಾಲದಿಂದಲೂ ರೂಢಿಯಲ್ಲಿತ್ತು. ಶಕ್ತಿಯನ್ನು ಮಾತೆಯ ರೂಪದಲ್ಲಿ ಆರಾಧಿಸುವುದು ಭಾರತೀಯ ಸಂಸ್ಕೃತಿಯ ವಿಶೇಷತೆಯಾಗಿದೆ. ಭೌತಿಕ/ದೈಹಿಕಶಕ್ತಿ, ಧನಶಕ್ತಿ ಹಾಗೂ ವಿದ್ಯಾಶಕ್ತಿಗಳು ಈ ಸೃಷ್ಟಿಯಲ್ಲಿರುವ ಶಕ್ತಿಯ ಮೂರು ರೂಪಗಳು. ಶಕ್ತಿಯ ಈ ಮೂರು ರೂಪಗಳ ಪ್ರತೀಕವಾಗಿ ಭೌತಿಕಶಕ್ತಿಯನ್ನು ದುರ್ಗೆಯ, ಧನಶಕ್ತಿಯನ್ನು ಲಕ್ಷ್ಮೀದೇವಿಯ ಹಾಗೂ ವಿದ್ಯಾಶಕ್ತಿಯನ್ನು ಸರಸ್ವತಿಯ ರೂಪದಲ್ಲಿ ಪೂಜಿಸುತ್ತಾರೆ. ಮೂರು ಮೂರು ದಿನಗಳು ಒಂದೊಂದು ಶಕ್ತಿಯ ಉಪಾಸನೆಗೆ ಮೀಸಲು.

ನವರಾತ್ರಿ ಕಳೆದ ಮೇಲೆ ಬರುವ ಹತ್ತನೇ ದಿನ ವಿಜಯದಶಮಿ. ಇದನ್ನು ದಸರಾ ಎಂದೂ ಕರೆಯುತ್ತಾರೆ. ದಸರಾ ಕಳೆದು ಇಪ್ಪತ್ತು ದಿನಗಳ ನಂತರ ದೀಪಾವಳಿ ಬರುತ್ತದೆ. ಯಾವ ಕೆಲಸವನ್ನೂ ಗಳಿಗೆ ಮುಹೂರ್ತ ನೋಡದೆಯೇ ಕೈಗೆತ್ತಿಕೊಳ್ಳ ಬಹುದಾದಷ್ಟು ಶುಭವಾದ ದಿನವಿದು.

ಶ್ರೀಶಾರದಾ ಮಂಟಪದಲ್ಲಿ ವಿಜಯ ದಶಮಿಯ ದಿವಸವನ್ನು ಚಂಡಿಕಾಹೋಮ ದೊಂದಿಗೆ ಆಚರಿಸುವುದು ಸಂಘ ಸ್ಥಾಪನೆ ಯಾದಂದಿನಿಂದಲೂ ತಪ್ಪಿಸಿಲ್ಲ. ನಮ್ಮ ಸಮಾಜದ ಋತ್ವಿಜರು ಸೇರಿ ಸಾಂಗೋಪವಾಗಿ ಈ ಕಾರ್ಯವನ್ನು ನೆರವೇರಿಸಿಕೊಡುತ್ತಾರೆ. ಸುಮಾರು ಆರುನೂರಕ್ಕೂ ಮಿಕ್ಕಿ ಸಮಾಜ ಬಾಂಧವರು ನೆರೆದು ದೇವಿಗೆ ಹವಿಸ್ಸನ್ನು ಸಮರ್ಪಿಸುತ್ತಾರೆ. ಪ್ರಸಾದ ಭೋಜನ ಸ್ವೀಕರಿಸುತ್ತಾರೆ. ಅಂದು ಸಮಾಜಬಾಂಧವರಿಗೆ ಹಾಗೂ ಮಕ್ಕಳಿಗೆ ವಿವಿಧ ಸ್ಪರ್ಧೆಗಳೂ ನಡೆಯುತ್ತವೆ. ಮಧ್ಯಾಹ್ನ ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ವಿದ್ಯಾರ್ಥಿವೇತನ ವಿತರಣೆ, ಪ್ರತಿಭಾ ಪುರಸ್ಕಾರ ನಡೆಯುತ್ತದೆ. ಸಂಜೆ ನಮ್ಮ ಸಮಾಜಬಾಂಧವರಿಂದ ಯಕ್ಷಗಾನವೂ ನಡೆಯುತ್ತದೆ. ಹಾಗಾಗಿ ಈ ದಿನವು ಉಡುಪಿಯ ನಮ್ಮ ಸಮಾಜಬಾಂಧವರಿಗೆ ನಾಡಹಬ್ಬವೇ ಆಗಿದೆ.

ಈ ವರ್ಷವೂ ತಾ.22-10-2015ನೇ ಗುರುವಾರ ವಿಜೃಂಭಣೆಯಿಂದ ವಿಜಯದಶಮೀ ಆಚರಣೆಯು ನಮ್ಮ ಶಾರದಾ ಮಂಟಪದಲ್ಲಿ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಸಕ್ರಿಯರಾಗಿ ಪಾಲ್ಗೊಳ್ಳಲು ನಮ್ಮ ಸಮಾಜಬಾಂಧವರನ್ನು ಆಡಳಿತಮಂಡಳಿಯೊಂದಿಗೆ ಶಾರದಾ ಬಳಗವೂ ಆಮಂತ್ರಿಸುತ್ತಿದೆ.

ನಮ್ಮ ಸಮಾಜದ ಧಾರ್ಮಿಕ ಕಾರ್ಯಕ್ರಮಗಳಲ್ಲಿ "ವೈದಿಕ ವಸ್ತ್ರಸಂಹಿತೆಯನ್ನು ಪಾಲಿಸುವುದನ್ನು ಜನಪ್ರಿಯಗೊಳಿಸುವುದು ಹೇಗೆ" ಎಂಬುದು ಅನೇಕ ಸಲ ಚರ್ಚೆಯಾಗಿರುವ ವಿಷಯವಾಗಿದೆ. ಇದು ಎಲ್ಲರ ಮನಸ್ಸಿಗೂ ಪಾಲಿಸಬೇಕು ಎಂದು ಒಪ್ಪಿಗೆಯಾಗಿರುವ ವಿಷಯವೂ ಆಗಿದೆ. ಆದರೆ ಅನಿವಾರ್ಯ ಕಾರಣಗಳಿಂದ ಇದನ್ನು ಕಾರ್ಯಗತ ಗೊಳಿಸುವುದು ನಮ್ಮಿಂದ ಆಗುತ್ತಿಲ್ಲ. ಆದರೆ ನಮ್ಮತನವನ್ನು ಉಳಿಸಿಕೊಳ್ಳಲು ಇದು ಅಗತ್ಯವೂ ಹೌದು. ಹಾಗಾಗಿ ಯಾವುದಾದ ರೊಂದು ಗಳಿಗೆಯಲ್ಲಿ ಈ ಬದಲಾವಣೆ ತರುವುದು ಅನಿವಾರ್ಯವಾಗಿದೆಯಲ್ಲವೇ. ಹಾಗಾದರೆ ವಿಜಯದಶಮಿಯ ದಿನ, ಚಂಡಿಕಾಹೋಮ ದಂತಹಾ ಶುಭಕಾರ್ಯದಲ್ಲಿ ವಸ್ತ್ರಸಂಹಿತೆ ಪಾಲಿಸುವಂತಹಾ ರೂಢಿಗೆ ಈ ದಿನವೇ ನಮ್ಮವರಿಗೆಲ್ಲಾ ಮುನ್ನುಡಿಯಾಗಲಿ. ಎಲ್ಲರೂ ವಿಜಯದಶಮಿಯಂದು ವೈದಿಕ ವಸ್ತ್ರಭೂಷಣ ಧರಿಸಿ ಸಮಾರಂಭಕ್ಕೆ ದೈವಿಕ ಕಳೆ ತನ್ನಿರಿ ಎಂದು ಆಶಿಸುತ್ತೇವೆ.

**- ಡಾ| ವೈ. ಸುದರ್ಶನ್ ರಾವ್**


**ಸಂಪಾದಕ ಮಂಡಳಿ**

ಡಾ| ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ




ಶ್ರೀ ಶಾರದಾ ಪತ್ರಿಕೆಯ ಓದುಗರಿಗೆ
ನವರಾತ್ರಿ,
ಕನ್ನಡ ರಾಜ್ಯೋತ್ಸವ ಹಾಗೂ
ದೀಪಾವಳಿ ಹಬ್ಬದ ಶುಭಾಶಯಗಳು

ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-2

## ಕೂಡಬೆಟ್ಟು ಶ್ರೀ ಸದಾಶಿವ ದೇವಸ್ಥಾನ, ಮಿತ್ತಬಾಗಿಲ ಗ್ರಾಮ, ಕಿಲ್ಲೂರು, ಬೆಳ್ತಂಗಡಿ



ಬೆಳ್ತಂಗಡಿ ತಾಲೂಕಿನ ಮಿತ್ತಬಾಗಿಲು ಗ್ರಾಮದ ಸೋಮಂತಡ್ಕ-ದಿಡುಪೆ ಬಳಿಯಿರುವ ಕೂಡಬೆಟ್ಟು ಗ್ರಾಮದ, ಪಶ್ಚಿಮಘಟ್ಟದ ತಪ್ಪಲಿನಲ್ಲಿ ಶಿವ ನದಿಯ ಕಿನಾರೆಯಲ್ಲಿರುವ ಈ ದೇವಸ್ಥಾನವು ನಮ್ಮ ಸಮಾಜದ ಅತೀ ಪುರಾತನ ದೇವಸ್ಥಾನಗಳಲ್ಲೊಂದು. ಕನಿಷ್ಟ ಒಂದು ಸಾವಿರ ವರ್ಷಗಳಷ್ಟು ಪುರಾತನವಾಗಿರಬಹುದಾದ ಈ ದೇವಸ್ಥಾನವನ್ನು ಬಂಗರಸನಾದ ವೀರ ನರಸಿಂಹನ ಪ್ರಧಾನಿಗಳಾಗಿದ್ದ ಕಿಲ್ಲೂರು ಮನೆತನದ ಶ್ರೀ ಕೃಷ್ಣಪ್ಪಯ್ಯನವರು ಹಾಗೂ ಶೇನೆರಬೆಟ್ಟು ಕರಣೀಕ ವೆಂಕಪ್ಪಯ್ಯನವರು 12ನೇ ಶತಮಾನದಲ್ಲಿ ಜೀರ್ಣೋದ್ಧಾರ ಮಾಡಿದ ದಾಖಲೆಗಳಿವೆ. ಹಾಗಾಗಿ 12ನೆಯ ಶತಮಾನಕ್ಕೂ ಹಿಂದಿನ ದೇವಾಲಯವಿದು.

ಇಲ್ಲಿರುವುದು ಖರಾಸುರನಿಂದ ಪ್ರತಿಷ್ಠಿತವಾದ ಲಿಂಗವೆಂಬ ನಂಬಿಕೆ, ಪಾಡ್ದನಗಳಲ್ಲಿ ಬರುವ "......ಮಲೆಬರೆ ಕೂಡುಲಿಂಗೇಸರ ದೇವರ ಗಂಧ ಪುರ್ಸಾದಸತ್ಯೆರ್" ಎಂಬ ವಾಕ್ಯಗಳು, ಕೋಡಗ (ವಾನರ) ವೊಂದು ಮಲೆಕುಡಿಯರ ಪೂಜಾಸ್ಥಳದಲ್ಲಿ ಲಿಂಗವನ್ನಿರಿಸಿತೆಂಬ ಕಥೆಗಳು ಈ ಕ್ಷೇತ್ರದ ಪೌರಾಣಿಕ ಹಿನ್ನೆಲೆಯೊಂದಿಗೆ ಕೂಡಿಕೊಂಡಿವೆ.

ಬೆಳ್ತಂಗಡಿಯಿಂದ ಚಾರ್ಮಾಡಿಗೆ ಪ್ರಯಾಣಿಸುವಾಗ ಉಜಿರೆ ದಾಟಿದ ನಂತರ ಸಿಗುವ ಸೋಮಂತಡ್ಕದಲ್ಲಿ ದಿಡುಪೆ ಮಾರ್ಗಕ್ಕೆ ತಿರುಗಿ, ಮತ್ತೆ ಒಂಬತ್ತು ಕಿ.ಮಿ. ಪ್ರಯಾಣಿಸಿದಾಗ , ಕುಕ್ಕಾವು ಸೇತುವೆ ಸಿಗುತ್ತದೆ. ಈ ಸ್ಥಳದಿಂದ ಹರಿವ ತೊರೆಯ ಉದ್ದಕ್ಕೂ ಇರುವ ಕೂಡಬೆಟ್ಟು ರಸ್ತೆಯಲ್ಲಿ ಹೋದರೆ ಪರ್ವತ ಶಿಖರದ ಬುಡದಲ್ಲಿ ಕೂಡಬೆಟ್ಟು ದೇವಸ್ಥಾನವಿದೆ.

ಸದಾಶಿವ ಇಲ್ಲಿಯ ಪ್ರಮುಖ ದೇವರು. ಏಳಡಿ ಎತ್ತರದ ಪುರುಷ ಶಿಲೆಯ ಲಿಂಗವಿದು. ದೇವರ ಎದುರು ನಮಸ್ಕಾರ ಮಂಟಪದಲ್ಲಿ ನುಣುಪಾಗಿ ಕೆತ್ತಿದ ನಂದಿಯ ವಿಗ್ರಹ ಪ್ರತಿಷ್ಠಾಪಿತವಾಗಿದೆ. ದೇವರ ಗುಡಿಯ ಬಲಭಾಗದಲ್ಲಿ ಅತ್ಯಂತ ಅಪರೂಪದ ಬಳಪದ ಶಿಲೆಯಲ್ಲಿ ಕೆತ್ತಿರುವ ಗಣಪತಿಯ ವಿಗ್ರಹವಿದೆ. ಈ ಗಣಪತಿಗೆ ಎರಡೇ ಕೈಗಳು. ಎಡಕೈಯಲ್ಲಿ ಮೋದಕವಿದ್ದರೆ ಬಲಕೈಯಲ್ಲಿ ಲೇಖನಿ ಇದೆ.

ಸದಾಶಿವ ಗುಡಿಯ ಎಡಭಾಗದಲ್ಲಿ ಐದಡಿ ಎತ್ತರದ ಆಂಜನೇಯನ ಗುಡಿ ಇದೆ. ಕೋಡಗವೊಂದು ಲಿಂಗವನ್ನು ತಂದಿಟ್ಟಿತೆಂಬ ಕಾರಣಿಕ ಕಥೆಗೆ ಪೂರಕವಾಗಿ ಇಲ್ಲಿದೆ ಈ ಪ್ರತಿಮೆ. ಎಡಗೈಯನ್ನು ಸೊಂಟದಲ್ಲಿಟ್ಟು ಬಲಗೈ ಎತ್ತಿರುವ ಈ ವೀರಾಂಜನೇಯನ ಆರು ಬೆರಳಿರುವ ಬಲಗೈ ಹಸ್ತದಲ್ಲಿ ಶ್ರೀರಾಮ ಹಾಗು ಲಕ್ಷ್ಮಣರ ಶಿಲ್ಪವನ್ನು ಬಿಡಿಸಲಾಗಿದೆ. ಈ ಹನುಮನ ವಿಗ್ರಹವು ಬೆಳೆಯುತ್ತಿದೆ ಎಂಬ ಪ್ರತೀತಿ ಇದೆ.

1999ರ ಇಸವಿಯಲ್ಲಿ ಬ್ರಹ್ಮಕಲಶೋತ್ಸವ ಜರಗಿದ್ದು, 2012ನೇ ಇಸವಿಯಲ್ಲಿ ಸಂಪೂರ್ಣ ಜೀರ್ಣೋದ್ಧಾರ ಕಾಮಗಾರಿ ಕೈಗೆತ್ತಿಕೊಳ್ಳ ಲಾಗಿತ್ತು. ಜೀರ್ಣೋದ್ಧಾರ ಸಮಿತಿಗೆ ಶ್ರೀ ಬಿ.ಕೆ ಸೂರ್ಯನಾರಾಯಣ ರಾವ್ ಹಾಗೂ ಶ್ರೀ ಬಿ.ಕೆ ಸುಬ್ಬರಾವ್ ಇವರು ಗೌರವಾಧ್ಯಕ್ಷರಾಗಿಯೂ, ಶ್ರೀ ಬಿ.ಕೆ.ಧನಂಜಯ ಕುಮಾರ್ ಅಧ್ಯಕ್ಷ ರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಈ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡು 2015ರ ಮಾರ್ಚ್ ತಿಂಗಳಲ್ಲಿ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಬ್ರಹ್ಮಕುಂಭಾಭಿಷೇಕವು ನೆರವೇರಿದೆ.

ದೇವಸ್ಥಾನದಲ್ಲಿ ನಿತ್ಯಪೂಜೆ, ನಂದಾದೀಪ, ಶನಿವಾರದಂದು ಅಶ್ವತ್ಥ ಪೂಜೆ, ಪಂಚಕಜ್ಜಾಯ ಸೇವೆ ಹಾಗೂ ಪ್ರತೀ ಸೋಮವಾರ ರುದ್ರಾಭಿಷೇಕ ನಡೆಯುತ್ತಿದೆ. ಗಣೇಶ ಚತುರ್ಥಿಗೆ ಮಹಾಗಣಪತಿ ಹೋಮ, ದೀಪಾವಳಿಗೆ ಹತ್ತನಾಜೆ ರಂಗ ಪೂಜೆ ಹಾಗೂ ಮಹಾಶಿವರಾತ್ರಿಗೆ ಏಕಾದಶ ರುದ್ರಾಭಿಷೇಕ ಹಾಗೂ ದೈವಗಳ ಕೋಲಗಳು ವಿಜೃಂಭಣೆಯಿಂದ ನೆರವೇರುತ್ತವೆ.

ಶ್ರೀ ಪಿ.ಎಸ್ ಚಂದ್ರಶೇಖರ ರಾವ್ ಇವರು ಈ ದೇವಸ್ಥಾನದ ಆಡಳಿತ ಮೊಕ್ತೇಸರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹೆಚ್ಚಿನ ಮಾಹಿತಿಗೆ ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷ ರಾದ ಶ್ರೀ ಸುಬ್ಬರಾವ್ ಬಿ.ಕೆ ಇವರನ್ನು 9008615521ರಲ್ಲಿ ಸಂಪರ್ಕಿಸಬಹುದು.

**(ಲೇಖನದ ಮಾಹಿತಿಗಾಗಿ ಡಾ| ಲೋಕೇಶ ರಾವ್ ಬಿ.ಕೆ ಇವರಿಗೆ ಧನ್ಯವಾದಗಳು)**


**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ
ಸಾಕಾರಗೊಳಿಸಿ
"ಗೃಹ ಸಾಲ"
(ಸಂಘದ ಪ್ರಾಥಮಿಕ ಸದಸ್ಯರಿಗೆ 11.50%)

| | | |
|---|---|---|
| ವಾಹನ ಸಾಲ | : | 13% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 13% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 13% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 181 ದಿನಗಳು | : 6%, | 182 ದಿನಗಳಿಂದ 364 ದಿನಗಳು | : 7%, |
| 1 ವರ್ಷ ಮತ್ತು 2 ವರ್ಷಕ್ಕಿಂತ ಕಡಿಮೆ | : 10% | 2 ವರ್ಷ ಮತ್ತು ಹೆಚ್ಚಿನ ಅವಧಿಗೆ | : 10.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ – ☎ 2522408    ಕುಕ್ಕಿಕಟ್ಟೆ ಶಾಖೆ – ☎ 2592133
ಪಡುಬಿದ್ರಿ ಶಾಖೆ – ☎ 2556608    ಕೋಟೇಶ್ವರ ಶಾಖೆ – ☎ 9341854114



*Power Cut !!!???*
*Install Best Quality Inverters...*

Mobile : 9483242111
K.S.Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.

Inverters, UPS, Batteries, Repairs Maintenance & Charging

## ಶ್ರೀಶಾರದಾ ದೇವಸ್ಥಾನ, ಶ್ರೀಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102

ಶಾರದಾ ಶಾರದಾಂಭೋಜವದನಾ ವದನಾಂಬುಜೇ । ಸರ್ವದಾಸರ್ವದಾऽಸ್ಮಾಕಂ ಸನ್ನಿಧಿಂ ಸನ್ನಿಧಿಂ ಕ್ರಿಯಾತ್ ॥

## ಶ್ರೀಶಾರದಾ ದೇವಸ್ಥಾನದಲ್ಲಿ ನವರಾತ್ರಿ ವಿಶೇಷ ಪೂಜೆಗಳು

ತಾ.13-10-2015ರಿಂದ 21-10-2015ರ ವರೆಗೆ ನವರಾತ್ರಿಯ ಪ್ರತಿದಿನ ಶ್ರೀದೇವಸ್ಥಾನದಲ್ಲಿ ಮಧ್ಯಾಹ್ನ 12-30ಕ್ಕೆ ಹಾಗೂ ರಾತ್ರಿ 8-30ಕ್ಕೆ ವಿಶೇಷ ಪೂಜೆ ನಡೆಯಲಿರುವುದು.
ಭಕ್ತಾದಿಗಳು ಪ್ರತಿದಿನ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿ. - ಆಡಳಿತ ಮಂಡಳಿ

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102

## ನವರಾತ್ರಿ ಉತ್ಸವದ ಪ್ರಯುಕ್ತ ನಡೆಯಲಿರುವ ಸ್ಪರ್ಧೆಗಳು

ತಾ.22-10-2015ನೇ ಗುರುವಾರ ಪೂರ್ವಾಹ್ನ ಗಂಟೆ 9.00 ರಿಂದ ನಮ್ಮ ಸಮಾಜ ಬಾಂಧವರಿಗಾಗಿ ಈ ಕೆಳಗಿನ ಸ್ಪರ್ಧೆಗಳು ನಡೆಯಲಿವೆ.

| ಸ್ಪರ್ಧೆಗಳು | ವಿಭಾಗಗಳು | | | ಅವಧಿ |
|---|---|---|---|---|
| **ಭಕ್ತಿಗೀತೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ | 8ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ | 4 ನಿಮಿಷ |
| | (ಯಾವುದೇ ರೀತಿಯ ಸಂಗೀತ ಉಪಕರಣ ಉಪಯೋಗಿಸಬಾರದು.) | | | |
| **ಚಿತ್ರರಚನೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ (ಪ್ರಕೃತಿಯ ಚಿತ್ರ-Scenery) | 5-7ನೇ ತರಗತಿಯವರೆಗೆ (ಹಕ್ಕಿ ಪ್ರಪಂಚ) | 8ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ (ಹಬ್ಬ ಅಥವಾ ಜಾತ್ರೆ) | 60 ನಿಮಿಷ |
| **ರಂಗವಲ್ಲಿ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ | 8ನೇ ತರಗತಿಯಿಂದ ಮೇಲ್ಪಟ್ಟು ಎಲ್ಲರಿಗೂ | 60 ನಿಮಿಷ |
| | (3×3 ಅಡಿ ಸ್ಥಳಾವಕಾಶದಲ್ಲಿ ಚುಕ್ಕೆ ಹಾಕಿ ರಂಗವಲ್ಲಿ-ಯಾವುದೇ ಪರಿಕರಣಗಳನ್ನು ಉಪಯೋಗಿಸಬಾರದು) | | | |
| **ಕಂಠಪಾಠ** ವಿದ್ಯಾರ್ಥಿಗಳಿಗೆ | 7ನೇ ತರಗತಿಯವರೆಗೆ (''ಭಜ ಗೋವಿಂದಂ'' ಕೆಳಗೆ ಕೊಟ್ಟಿರುವ ಶ್ಲೋಕಗಳು) | | 8ನೇ ತರಗತಿಯಿಂದ ಮೇಲ್ಪಟ್ಟು ಶ್ರೀಮಹಿಷಾಸುರಮರ್ದಿನಿ ಸ್ತೋತ್ರಂ | |
| **ಶಂಖ ಊದುವುದು** (ಮುಕ್ತ ಅವಕಾಶ) | ಶಂಖಗಳನ್ನು ಸ್ಪರ್ಧಿಗಳೇ ತರಬೇಕು | | | |
| **ಕನ್ನಡ ಆಶು-ಭಾಷಣ** ವಿದ್ಯಾರ್ಥಿಗಳಿಗೆ | 8ನೇ ತರಗತಿಯಿಂದ 10ನೇ ತರಗತಿಯವರೆಗೆ | | ಪದವಿಪೂರ್ವ ಮತ್ತು ಪದವಿ ತರಗತಿಯವರೆಗೆ | 3 ನಿಮಿಷ |
| **ಹಸೆಮಣೆ ಹಾಡುಗಳು/ಕನಕಧಾರ ಸ್ತೋತ್ರ** | 50 ವರ್ಷ ಮೇಲ್ಪಟ್ಟ ಮಹಿಳೆಯರಿಗೆ | | | |
| **ಚೂರ್ಣಿಕೆ** | ಎಲ್ಲಾ ವಯೋಮಾನದವರಿಗೆ | | | |

ವಿಶೇಷ ಸೂಚನೆಗಳು :

1) ಆಸಕ್ತ ಸ್ಪರ್ಧಾಳುಗಳು ಅದೇ ದಿನ ಬೆಳಿಗ್ಗೆ 8.30ಕ್ಕೆ ಹಾಜರಿದ್ದು ತಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳಬೇಕು, ಕಡ್ಡಾಯವಾಗಿ ಬೆಳಿಗ್ಗೆ 9-30ಕ್ಕೆ ಸ್ಪರ್ಧೆಗಳು ಪ್ರಾರಂಭವಾಗಲಿವೆ
2) ರಂಗವಲ್ಲಿಗೆ ಬಣ್ಣದ ಹುಡಿ ಮತ್ತು ಚಿತ್ರ ರಚನೆಗೆ ಕಾಗದ ಹಾಳೆಗಳನ್ನು ಒದಗಿಸಲಾಗುವುದು. ಬೇಕಾದ ಇತರ ಪರಿಕರಗಳನ್ನು ಸ್ಪರ್ಧಾಳುಗಳೇ ತರಬೇಕು.
3) ಹೆಚ್ಚಿನ ನಿಯಮಗಳನ್ನು ಸ್ಪರ್ಧೆ ಆರಂಭವಾಗುವ ಮೊದಲು ಸ್ಪರ್ಧಾಳುಗಳಿಗೆ ತಿಳಿಸಲಾಗುವುದು.
4) ಕನಿಷ್ಠ 3 ಜನ ಸ್ಪರ್ಧಿಗಳು ಇಲ್ಲದಿದ್ದಲ್ಲಿ ಸ್ಪರ್ಧೆ ನಡೆಸುವ ಅಥವಾ ಬಿಡುವ ನಿರ್ಧಾರ ವ್ಯವಸ್ಥಾಪಕರದ್ದು.
5) ಫಲಿತಾಂಶ ನಿರ್ಣಯದಲ್ಲಿ ನಿರ್ಣಾಯಕರ ತೀರ್ಮಾನವೇ ಅಂತಿಮ.

ಮಧ್ಯಾಹ್ನದ ಭೋಜನದ ನಂತರ ಸಭಾಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿವೇತನ ವಿತರಣೆ,
ರಾಜ್ಯ ಧಾರ್ಮಿಕ ಪರಿಷತ್ತಿನ ಸದಸ್ಯರಾದ ಶ್ರೀ ಎನ್.ಕೆ.ಜಗನ್ನಿವಾಸರಾಯರಿಗೆ ಸನ್ಮಾನ, ಬಹುಮಾನ ವಿತರಣೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಲಿವೆ.
ನಂತರ ಶ್ರೀಶಾರದಾ ಹವ್ಯಾಸಿ ಯಕ್ಷ ಕಲಾವಿದರು, ಕುಂಜಿಬೆಟ್ಟು, ಉಡುಪಿ ಇವರಿಂದ ಯಕ್ಷಗಾನ
''ಭೀಷ್ಮ ವಿಜಯ'' ಸಮಯ: ಸಂಜೆ 6-00ರಿಂದ 9-00

## ಭಜ ಗೋವಿಂದಂ

**(7ನೇ ತರಗತಿಯವರೆಗಿನ ಮಕ್ಕಳಿಗೆ)**

ಭಜ ಗೋವಿಂದಂ ಭಜ ಗೋವಿಂದಂ ಗೋವಿಂದಂ ಭಜ ಮೂಢಮತೇ ।
ಸಂಪ್ರಾಪ್ತೇ ಸನ್ನಿಹಿತೇ ಕಾಲೇ ನಹಿನ ಹಿ ರಕ್ಷತಿ ಡುಕೃಂಕರಣೇ ।೧।

ಮೂಢ ಜಹೀಹಿ ಧನಾಗಮತೃಷ್ಣಾಂ ಕುರು ಸದ್ಬುದ್ಧಿಂ ಮನಸಿ ವಿತೃಷ್ಣಾಮ್।
ಯಲ್ಲಭಸೇ ನಿಜಕರ್ಮೋಪಾತ್ತಂ ವಿತ್ತಂ ತೇನ ವಿನೋದಯ ಚಿತ್ತಂ ।೨।

ನಾರೀಸ್ತನಭರನಾಭೀದೇಶಂ ದೃಷ್ಟ್ವಾ ಮಾಗಾ ಮೋಹಾವೇಶಂ ।
ಏತನ್ಮಾಂಸವಸಾದಿವಿಕಾರಂ ಮನಸಿ ವಿಚಿಂತಯ ವಾರಂ ವಾರಮ್ ।೩।

ನಲಿನೀದಲಗತಜಲಮತಿತರಲಂ ತದ್ವಜ್ಜೀವಿತಮತಿಶಯಚಪಲಮ್ ।
ವಿದ್ಧಿ ವ್ಯಾಧ್ಯಭಿಮಾನಗ್ರಸ್ತಂ ಲೋಕಂ ಶೋಕಹತಂ ಚ ಸಮಸ್ತಮ್ ।೪।

ಯಾವದ್ವಿತ್ತೋಪಾರ್ಜನಸಕ್ತಸ್ತಾವನ್ನಿಜಪರಿವಾರೋ ರಕ್ತಃ ।
ಪಶ್ಚಾಜ್ಜೀವತಿ ಜರ್ಜರದೇಹೇ ವಾರ್ತಾಂ ಕೋಽಪಿ ನ ಪೃಚ್ಛತಿ ಗೇಹೇ ।೫।

ಯಾವತ್ಪವನೋ ನಿವಸತಿ ದೇಹೇ ತಾವತ್ಪೃಚ್ಛತಿ ಕುಶಲಂ ಗೇಹೇ ।
ಗತವತಿ ವಾಯೌ ದೇಹಾಪಾಯೇ ಭಾರ್ಯಾ ಬಿಭ್ಯತಿ ತಸ್ಮಿನ್ಕಾಯೇ ।೬।

ಬಾಲಸ್ತಾವತ್ಕ್ರೀಡಾಸಕ್ತ ಸ್ತರುಣಾಸ್ತಾವತ್ತರುಣೀಸಕ್ತಃ ।
ವೃದ್ಧಸ್ತಾವಚ್ಚಿಂತಾಸಕ್ತ ಪರಮೇ ಬ್ರಹ್ಮಣಿ ಕೋಽಪಿ ನ ಸಕ್ತಃ ।೭।

ಕಾ ತೇ ಕಾಂತಾ ಕಸ್ತೇ ಪುತ್ರಃ ಸಂಸಾರೋಽಯಮತೀವ ವಿಚಿತ್ರಃ ।
ಕಸ್ಯ ತ್ವಂ ಕಃ ಕುತ ಆಯಾತಃ ಸ್ತತ್ವಂ ಚಿಂತಯ ತದಿಹ ಭ್ರಾತಃ ।೮।

ಸತ್ಸಂಗತ್ವೇ ನಿಸ್ಸಂಗತ್ವಂ ನಿಸ್ಸಂಗತ್ವೇ ನಿರ್ಮೋಹತ್ವಮ್ ।
ನಿರ್ಮೋಹತ್ವೇ ನಿಶ್ಚಲತತ್ವಂ ನಿಶ್ಚಲತತ್ವೇ ಜೀವನ್ಮುಕ್ತಿಃ ।೯।

ವಯಸಿ ಗತೇ ಕಃ ಕಾಮವಿಕಾರಃ ಶುಷ್ಕೇ ನೀರೇ ಕಃ ಕಾಸಾರಃ ।
ಕ್ಷೀಣೆ ವಿತ್ತೇ ಕಃ ಪರಿವಾರೋ ಜ್ಞಾತೇ ತತ್ತ್ವೇ ಕಃ ಸಂಸಾರಃ ।೧೦।

## ಶ್ರೀಮಹಿಷಾಸುರಮರ್ದಿನಿ ಸ್ತೋತ್ರಂ

**(8ನೇ ತರಗತಿಯಿಂದ ಮೇಲ್ಪಟ್ಟ ಮಕ್ಕಳಿಗೆ)**

ಅಯಿ ಗಿರಿನಂದಿನಿ ನಂದಿತಮೇದಿನಿ ವಿಶ್ವವಿನೋದಿನಿ ನಂದನುತೇ
ಗಿರಿವರವಿಂಧ್ಯಶಿರೋಧಿನಿವಾಸಿನಿ ವಿಷ್ಣುವಿಲಾಸಿನಿ ಜಿಷ್ಣುನುತೇ
ಭಗವತಿ ಹೇ ಶಿತಿಕಂಠಕುಟುಂಬಿನಿ ಭೂರಿಕುಟುಂಬಿನಿ ಭೂರಿಕೃತೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೧ ।

ಸುರವರವರ್ಷಿಣಿ ದುರ್ಧರಧರ್ಷಿಣಿ ದುರ್ಮುಖಮರ್ಷಿಣಿ ಹರ್ಷರತೇ
ತ್ರಿಭುವನಪೋಷಿಣಿ ಶಂಕರತೋಷಿಣಿ ಕಿಲ್ಬಿಷಮೋಷಿಣಿ ಘೋಷರತೇ
ದನುಜನಿರೋಷಿಣಿ ದಿತಿಸುತರೋಷಿಣಿ ದುರ್ಮದಶೋಷಿಣಿ ಸಿಂಧುಸುತೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೨ ।

ಅಯಿ ಜಗದಂಬ ಮದಂಬ ಕದಂಬವನಪ್ರಿಯವಾಸಿನಿ ಹಾಸರತೇ
ಶಿಖರಿಶಿರೋಮಣಿತುಂಗಹಿಮಾಲಯಶೃಂಗನಿಜಾಲಯ ಮಧ್ಯಗತೇ
ಮಧುಮಧುರೇ ಮಧುಕೈಟಭಗಂಜಿನಿ ಕೈಟಭಭಂಜಿನಿ ರಾಸರತೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೩ ।

ಅಯಿ ಶತಖಂಡವಿಖಂಡಿತರುಂಡವಿತುಂಡಿತಶುಂಡಗಜಾಧಿಪತೇ
ರಿಪುಗಜಗಂಡವಿದಾರಣಚಂಡಪರಾಕ್ರಮಶೌಂಡ ಮೃಗಾಧಿಪತೇ
ನಿಜಭುಜದಂಡನಿಪಾತಿತಚಂಡನಿಪಾತಿತಮುಂಡಭಟಾಧಿಪತೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೪ ।

ಅಯಿ ರಣದುರ್ಮದಶತ್ರುವಧೋದಿತದುರ್ಧರನಿರ್ಜರಶಕ್ತಿಭೃತೇ
ಚತುರವಿಚಾರಧುರೀಣಮಹಾಶಿವದೂತಕೃತಪ್ರಮಥಾಧಿಪತೇ
ದುರಿತದುರೀಹದುರಾಶಯದುರ್ಮತಿದಾನವದೂತಕೃತಾಂತಮತೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೫ ।

ಅಯಿ ಶರಣಾಗತವೈರಿವಧೂವರವೀರವರಾಭಯದಾಯಕರೇ
ತ್ರಿಭುವನಮಸ್ತಕಶೂಲವಿರೋಧಿಶಿರೋಧಿಕೃತಾಮಲಶೂಲಕರೇ
ದುಮಿದುಮಿತಾಮರದುಂದುಭಿನಾದಮಹೋಮುಖರೀಕೃತತಿಗ್ಮಕರೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೬ ।

ಅಯಿ ನಿಜಹುಂಕೃತಿಮಾತ್ರನಿರಾಕೃತಧೂಮ್ರವಿಲೋಚನಧೂಮ್ರಶತೇ
ಸಮರವಿಶೋಷಿತಶೋಣಿತಬೀಜಸಮುದ್ಭವಶೋಣಿತಬೀಜಲತೇ
ಶಿವಶಿವ ಶುಂಭನಿಶುಂಭಮಹಾಹವತರ್ಪಿತಭೂತಪಿಶಾಚರತೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೭ ।

ಧನುರನುಸಂಗರಣಕ್ಷಣಸಂಗಪರಿಸ್ಫುರದಂಗನಟತ್ಕಟಕೇ
ಕನಕಪಿಶಂಗಪೃಷತ್ಕನಿಷಂಗರಸದ್ಭಟಶೃಂಗಹತಾವಟುಕೇ
ಕೃತಚತುರಂಗಬಲಕ್ಷಿತಿರಂಗಘಟದ್ಬಹುರಂಗರಟದ್ಬಟುಕೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೮ ।

ಸುರಲಲನಾತತಥೇಯಿತಥೇಯಿತಥಾಭಿನಯೋತ್ತರನೃತ್ಯರತೇ
ಕಕುಭಾಂಪತಿಕೃತಥೋಂಗದತಾಲಕ ತಾಲಕುತೂಹಲನಾದರತೇ
ಧಿಮಿಕಿಟಧಿಕ್ಕಿಟಧಿಕಟಧಿಮಿಧ್ವನಿಧೀರಮೃದಂಗನಿನಾದರತೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೯ ।

ಜಯ ಜಯ ಜಪ್ಯಜಯೇ ಜಯಶಬ್ದಪರಸ್ತುತಿತತ್ಪರವಿಶ್ವನುತೇ
ಝುಣ ಝುಣ ಝಿಂಜಿಮಿ ಝಿಂಕೃತನೂಪುರಶಿಂಜಿತಮೋಹಿತಭೂತಪತೇ
ನಟಿತನಟಾರ್ಧನಟೀನಟನಾಯಕನಾಟಿತನಾಟ್ಯಸುಗಾನರತೇ
ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯಕಪರ್ದಿನಿ ಶೈಲಸುತೇ । ೧೦ ।

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಳಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ

# ಅಮೇರಿಕದಲ್ಲಿ ಹಿಂದೂ ಧರ್ಮ ಮತ್ತು ಸಂಸ್ಕೃತಿ

– ಡಾ। ಎಚ್.ವಿ. ನರಸಿಂಹ ಮೂರ್ತಿ, ಕುಂದಾಪುರ

(ಹಿಂದಿನ ಸಂಚಿಕೆಯಿಂದ...)

**ಯೋಗ–ಸಂಸ್ಕೃತಗಳಿಗೆ ಬೇಡಿಕೆ.**

ಯೋಗ ಮತ್ತು ಸಂಸ್ಕೃತಗಳಿಗೆ ಅಮೆರಿಕದಲ್ಲಿ ಭಾರೀ ಬೇಡಿಕೆ ಇದೆ. ಒತ್ತಡದ ಜೀವನ ಶೈಲಿ, ಖಿನ್ನತೆ, ಒಂಟಿತನ–ಮೊದಲಾದ ಸಮಸ್ಯೆಗಳಿಂದ ಹೊರಬರಲು ಯೋಗ ಮತ್ತು ಧ್ಯಾನದ ಮೊರೆ ಹೋಗುತ್ತಿದ್ದಾರೆ. ನಾನು ಭೇಟಿ ನೀಡಿದ ಫ್ಲೋರಿಡಾ ರಾಜ್ಯದ ಜಾಕ್ಸನ್ವಿಲ್‌ನಲ್ಲಿರುವ 'ಹಿಂದೂ ಸೊಸೈಟಿ ಆಫ್ ನಾರ್ತ್ ಈಸ್ಟ್ ಫ್ಲೋರಿಡಾ' ಎಂಬ ಸಂಸ್ಥೆಯ ಆಶ್ರಯದಲ್ಲಿ ಪ್ರತಿನಿತ್ಯ ಬೆಳಗ್ಗೆ ಸೂರ್ಯನಮಸ್ಕಾರ, ಯೋಗಾಭ್ಯಾಸ, ಧ್ಯಾನತರಬೇತಿ ಮತ್ತು ಸಂಸ್ಕೃತ ಕಲಿಕೆಯ ತರಬೇತಿಗಳು ನಡೆಯುತ್ತಿದ್ದುದನ್ನು ನೋಡಿದ್ದೇನೆ. ನ್ಯೂಯಾರ್ಕ್‌ನಂತಹ ಮಹಾನಗರದಲ್ಲಿ ಯೋಗಕಲಿಸುವ ಕಾಲೇಜುಗಳೂ, ಸಂಸ್ಥೆಗಳೂ ಹುಟ್ಟಿವೆಯಂತೆ. ನಮ್ಮ ಪ್ರಧಾನಿ ಮೋದಿಯವರ ಆಶಯದಂತೆ ವಿಶ್ವ ಸಂಸ್ಥೆ ಘೋಷಿಸಿರುವ ಯೋಗದಿನವನ್ನು ಈ ವರ್ಷ ಜೂನ್ 21ರಂದು ಅಮೆರಿಕದ ಅನೇಕ ಕಡೆ ಆಚರಿಸಿರುವುನ್ನು ನಾನು ಅಲ್ಲಿನ ಸುದ್ಧಿ ಪತ್ರಿಕೆಗಳಲ್ಲಿ ಓದಿದ್ದೇನೆ. ನ್ಯೂಯಾರ್ಕ್‌ನ ಟೈಮ್ ಸ್ಕ್ವೇರ್‌ನಲ್ಲಿ ನಡೆದ ಯೋಗ ದಿನಾಚರಣೆಯ ಉದ್ಘಾಟನೆಯಲ್ಲಿ ವಿದೇಶಾಂಗ ಸಚಿವೆ ಸುಷ್ಮಾಸ್ವರಾಜ್ ಮತ್ತು 'ಆರ್ಟ್ ಆಫ್ ಲಿವಿಂಗ್'ನ ನೇತಾರ ರವಿಶಂಕರ್ ಗುರೂಜೀಯವರು ಭಾಗವಹಿಸಿದ್ದು ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾಗಿತ್ತು.

ಸಂಸ್ಕೃತವನ್ನು ಅನಿವಾಸೀ ಭಾರತೀಯರು ಮಾತ್ರವಲ್ಲದೆ ಅಮೆರಿಕನ್ನರೂ ಕೂಡ ಆಸಕ್ತಿಯಿಂದ ಕಲಿಯುತ್ತಿದ್ದಾರೆ. ಫ್ಲೋರಿಡಾ ಪ್ರಾಂತ್ಯದಲ್ಲಿ 1993ರಲ್ಲಿ ಸ್ಥಾಪಿಸಲಾದ 'ಹಿಂದೂ ಯೂನಿವರ್ಸಿಟಿ ಆಫ್ ಅಮೆರಿಕ'ವು ಯೋಗ, ಸಂಸ್ಕೃತ, ಹಿಂದೂ ಧರ್ಮ, ಸಂಸ್ಕೃತಿ ಮತ್ತು ಭಾರತೀಯ ತತ್ತ್ವಜ್ಞಾನಗಳ ಅಧ್ಯಯನಕ್ಕೆ ಅತ್ಯಂತ ಪ್ರಸಿದ್ಧವಾದ ಶಿಕ್ಷಣ ಕೇಂದ್ರ.

**ಶ್ರದ್ಧಾ ಕೇಂದ್ರವಾದ ದೇವಸ್ಥಾನಗಳು**

ಹಿಂದೂಗಳ ಸಂಖ್ಯೆ ಹೆಚ್ಚುತ್ತಿದ್ದಂತೆ ಶ್ರದ್ಧಾ ಕೇಂದ್ರಗಳಾದ ದೇವಾಲಯಗಳ ಸಂಖ್ಯೆಯೂ ಹೆಚ್ಚುತ್ತಿದೆ. ಇವುಗಳ ಮೂಲಕ ಅಮೇರಿಕನ್ನರಿಗೆ ಭಾರತೀಯ ಆಧ್ಯಾತ್ಮ, ದೈವಭಕ್ತಿ, ಜೀವನ ಪದ್ಧತಿಗಳ ಪರಿಚಯವಾಗುತ್ತಿದೆ. ಅಮೆರಿಕದಲ್ಲಿ ಸುಮಾರು 550 ಹಿಂದೂ ದೇವಾಲಯಗಳಿವೆಯೆಂದು ಅಧ್ಯಯನ ವರದಿಯೊಂದು ತಿಳಿಸುತ್ತದೆ. ಈ ಪೈಕಿ ನ್ಯೂಯಾರ್ಕ್ ಪ್ರಾಂತ್ಯದಲ್ಲಿ ಸುಮಾರು 170, ಟೆಕ್ಸಾಸ್‌ನಲ್ಲಿ 80, ವಾಷಿಂಗ್‌ಟನ್ ಸುತ್ತಮುತ್ತ 60, ಫ್ಲೋರಿಡಾದಲ್ಲಿ 50, ನ್ಯೂಜೆರ್ಸಿಯ ಪರಿಸರದಲ್ಲಿ 45ಕ್ಕೂ ಹೆಚ್ಚು ದೇವಾಲಯಗಳಿವೆಯಂತೆ. ಲನ್‌ಹಾಸ್ ಎಂಬಲ್ಲಿರುವ ಶಿವವಿಷ್ಣು ದೇವಸ್ಥಾನಕ್ಕೆ 2009ರ ಅಕ್ಟೋಬರ್‌ನಲ್ಲಿ ಅಧ್ಯಕ್ಷ ಬರಾಕ್ ಒಬಾಮಾ ಭೇಟಿ ನೀಡಿ, ಅಲ್ಲಿ ಕೆಲಹೊತ್ತು ಕಳೆದದ್ದು ದೊಡ್ಡ ಸುದ್ದಿಯಾಗಿತ್ತು.

ತಾಂಪಾದಲ್ಲಿರುವ 'ಹಿಂದೂ ಸೊಸೈಟಿ ಆಫ್ ನಾರ್ತ್ ಈಸ್ಟ್ ಫ್ಲೋರಿಡಾ'ದವರ ಹಿಂದೂ ದೇವಾಲಯ ಸಮುಚ್ಚಯ, ಜಾಕ್ಸನ್ವಿಲ್‌ನ ಗಣಪತಿ ದೇವಸ್ಥಾನ, 'ಹಿಂದು ಸೆಂಟರ್ ಆಫ್ ವರ್ಜೀನಿಯಾ'ದ ವೆಂಕಟೇಶ್ವರ ದೇವಸ್ಥಾನ, ವಾಷಿಂಗ್‌ಟನ್‌ನ ದಿ ಹಿಂದೂ ಸೆಂಟರ್ ಆಫ್ ಮೆಟ್ರೊಪೋಲಿಯನ್, ನ್ಯೂಜೆರ್ಸಿ ಸಮೀಪದ ರಾಬಿನ್ಸ್ ವಿಲ್ಲೆಯ ಬಹಳ ವಿರಳವೂ, ಸುಂದರವೂ ಆದ ಶ್ವೇತ ಶಿಲಾಮಯ ಸ್ವಾಮಿ ನಾರಾಯಣ ಮಂದಿರ, ಅಲ್ಲಿಗೆ ಸಮೀಪದ ಲನ್‌ಹಾನ್ ಎಂಬಲ್ಲಿರುವ ಉತ್ತರ ಭಾರತ ಶೈಲಿಯ ಶಿವ–ವಿಷ್ಣುದೇವಸ್ಥಾನ, ಬ್ರಿಜ್‌ವಾಟರ್‌ನ ಎತ್ತರದ ಬೆಟ್ಟದಲ್ಲಿರುವ ಬಾಲಾಜೀ ಮಂದಿರ, ಪಿಟ್ಸ್‌ಬರ್ಗ್‌ನ ಪೆನ್ ಹಿಲ್ಸ್‌ನಲ್ಲಿರುವ ತಿರುಪತಿ ಮಾದರಿಯ ಪ್ರಾಚೀನ ವೆಂಕಟರಮಣ ದೇವಸ್ಥಾನ, ಸೈಲಾರ್ಸ್‌ಬರ್ಗ್‌ನಲ್ಲಿರುವ ಆರ್ಷ ವಿದ್ಯಾಪೀಠ ಮತ್ತು ದಕ್ಷಿಣಾಮೂರ್ತಿ ದೇವಸ್ಥಾನ, ಸ್ಟ್ರೌಡ್ಸ್‌ಬರ್ಗ್ ನಲ್ಲಿ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರುಗಳ ಮಾರ್ಗದರ್ಶನದಲ್ಲಿ 'ಶೃಂಗೇರಿ ವಿದ್ಯಾಭಾರತೀ ಫೌಂಡೇಶನ್ (ಎಸ್.ವಿ.ಬಿ.ಎಫ್) ಸ್ಥಾಪಿಸಿದ ಶೃಂಗೇರಿ ಶ್ರೀ ಶಾರದಾಂಬಾ ದೇವಾಲಯ, ಉಡುಪಿಯ ಪುತ್ತಿಗೆ ಮಠದ ಸ್ವಾಮಿಜೀಯವರು ಎಡಿಸನ್‌ನಲ್ಲಿ ಆರಂಭಿಸಿರುವ ಶ್ರೀಕೃಷ್ಣ ವೃಂದಾವನ, ಅಟ್ಲಾಂಟಾದಲ್ಲಿರುವ ಮತ್ತೊಂದು ಸುಪ್ರಸಿದ್ಧ ಸ್ವಾಮಿ ನಾರಾಯಣ ಮಂದಿರ ñ ಇವೆಲ್ಲ ಈ ಬಾರಿ ನಾನು ನೋಡಿದ ಕೆಲವು ಪ್ರಸಿದ್ಧ ಹಿಂದು ಶ್ರದ್ಧಾಕೇಂದ್ರಗಳು. ಇವುಗಳಲ್ಲದೆ ಅಲಾಹು ಆ ಎಂಬಲ್ಲಿ ಅಂತಾರಾಷ್ಟ್ರೀಯ 'ಇಸ್ಕಾನ್ ಸಂಸ್ಥೆಯ ಹರೇ ಕೃಷ್ಣ ದೇವಸ್ಥಾನವನ್ನು ನೋಡುವ ಅವಕಾಶವೂ ಲಭಿಸಿತು.

ಆಯಾ ಪ್ರದೇಶದ ಆಸಕ್ತ ಹಿಂದೂಗಳು ಸೇರಿ ಆರಂಭಿಸಿರುವ ಈ ಎಲ್ಲ ದೇವಸ್ಥಾನಗಳಲ್ಲಿ ತ್ರಿಕಾಲ ಪೂಜೆ, ಭಜನೆ, ವೇದ ಪಾರಾಯಣ, ಹಿಂದು ಹಬ್ಬ–ಹರಿದಿನಗಳ ಆಚರಣೆ, ಉಪನಯನ–ವಿವಾಹಾದಿ ಕರ್ಮಾಂಗಗಳು, ವಿದ್ವಾಂಸರಿಂದ ಧಾರ್ಮಿಕ ಪ್ರವಚನ, ಒಂದೆರಡು ದೇವಸ್ಥಾನಗಳಲ್ಲಿ ರಥೋತ್ಸವ–ಇವೆಲ್ಲ ನಡೆಯುತ್ತವೆ. ಭಕ್ತರಿಗೆ ಸೇವೆ ಮಾಡಿಸಲು ಅವಕಾಶ ಕಲ್ಪಿಸಲಾಗಿದೆ. ಸ್ವಚ್ಛತೆ ಮತ್ತು ಶಿಸ್ತಿಗೆ ವಿಶೇಷ ಆದ್ಯತೆ. ಎಲ್ಲ ದೇವಾಲಯಗಳ ಅರ್ಚಕರು ಶೃಂಗೇರಿಯಿಂದ ನೇಪಾಳದವರೆಗಿನ ಬ್ರಾಹ್ಮಣರು, ಅವರ ಮಂತ್ರೋಚ್ಚಾರಣೆ, ಪೂಜೆಯ ವಿಧಿ–ವಿಧಾನ, ಶ್ರದ್ಧಾಭಕ್ತಿಗಳು, ಆತ್ಮೀಯತೆ–ಇವೆಲ್ಲ ಎಲ್ಲರನ್ನೂ ಆಕರ್ಷಿಸುತ್ತವೆ.

ಅಮೆರಿಕದಾದ್ಯಂತ 91 ಸ್ವಾಮಿ ನಾರಾಯಣ ಮಂದಿರಗಳನ್ನು ಸ್ಥಾಪಿಸಿರುವ ಗುಜರಾತಿನ ಭಕ್ತಿವೇದಾಂತ ಸೊಸೈಟಿಯ ಕಾರ್ಯ ಶ್ಲಾಘನೀಯ. ಮಾರಾಟಕ್ಕಿದ್ದ ಕೆಲವು ಚರ್ಚುಗಳನ್ನು ಖರೀದಿಸಿ, ಅಲ್ಲಿ ಅಮೃತ ಶಿಲೆಯ ಸುಂದರ ದೇವಾಲಯಗಳನ್ನು ನಿರ್ಮಿಸಲಾಗುತ್ತಿದೆ. ಈ ದೇವಾಲಯಗಳಲ್ಲಿ ಕೇವಲ ದೇವತಾ ಕಾರ್ಯಗಳನ್ನಲ್ಲದೆ ಶಿಕ್ಷಣ, ಆರೋಗ್ಯ, ಪರಿಸರ, ಸಮಾಜ ಮತ್ತು ಮಾನವೀಯ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ.

**ಪಶ್ಚಿಮಕಾಶೀ**

ಇದೀಗ ಇಲ್ಲಿನ ಫಿಲಿಂಟ್ ನದಿಯ ದಡದಲ್ಲಿ ಸುಮಾರು 25 ಎಕ್ರೆ ಪ್ರದೇಶದಲ್ಲಿ 'ಕಾಶಿವಿಶ್ವನಾಥ ಮಂದಿರ'ವು ನಿರ್ಮಾಣವಾಗುತ್ತಿದೆ. 'ಪಶ್ಚಿಮಕಾಶೀ' ಎಂದೇ ಕರೆಯಲಾರಂಭಿಸಿರುವ ಈ ಕ್ಷೇತ್ರದಲ್ಲಿ ಕಾಶೀಮಾದರಿಯಲ್ಲೇ ಪೂಜೆ–ಪುರಸ್ಕಾರ, ತೀರ್ಥಸ್ನಾನ, ಹಿಂದು ಶವ ಸಂಸ್ಕಾರಾದಿಗಳಿಗೆ ಅತ್ತ್ಯುತ್ತಮ ವ್ಯವಸ್ಥೆ ಮಾಡುವುದಾಗಿ ಹೇಳಲಾಗುತ್ತಿದೆ.

ಹೀಗೆ (ಕ್ರೈ)ಶ್ರೈಸ್ತ ಬಾಹುಳ್ಯದ ಅಮೆರಿಕ ದೇಶದ ಎಲ್ಲೆಡೆ ಹಿಂದೂ ಧರ್ಮ ಮತ್ತು ಸಂಸ್ಕೃತಿಗಳು ವ್ಯಾಪಿಸುತ್ತಿವೆ. ಅಮೆರಿಕದಲ್ಲೇ ಹುಟ್ಟಿ ಬೆಳೆದಿರುವ ಹಿಂದೂ ನವಪೀಳಿಗೆ ಪಾಶ್ಚಾತ್ಯ ಸಂಸ್ಕೃತಿಯತ್ತ ಹೆಚ್ಚುವಾಲದೆ, ಭಾರತೀಯ ಜೀವನ ಪದ್ಧತಿಯನ್ನು ರೂಢಿಸಿಕೊಳ್ಳುತ್ತಿರುವುದು ಸಂತಸದ ಸಂಗತಿ.

---

## ದೇಶ ಭಕ್ತಿ

ಪ್ರೀತಿಯಿಂದ ಇತ್ತರು ನಮಗೆ,
ನಮ್ಮ ಹಿರಿಯರಂದು
ನೆತ್ತರ ತೆತ್ತು, ವೀರ ಕಲಿಗಳಾಗಿ,
ಬಿಳಿಯರ ವಿರುದ್ಧ
ರಣ ಕಹಳೆಯೊಂದಿಗೆ,
ಎದೆಗೆ–ಎದೆ ಕೊಟ್ಟು ಮಡಿದರಂದು,
ಹೆಮ್ಮೆಯ ವೀರ ಮಣಿಗಳು.....

ಸಂಸಾರ ಸಾಗರದಲ್ಲಿ,
ಭಾರತಾಂಬೆಯನ್ನು ರಕ್ಷಿಸಲು,
ಪಡೆಯಲು ಸ್ವಾತಂತ್ರ್ಯವನ್ನು,
ಅಂದು–ಆ ಕರಾಳದಲ್ಲಿ ಮಣ್ಣಾದರು.....

ಇಂದು,
ಸಂಸ್ಕೃತಿಯನ್ನು ಉಳಿಸಲು,
ಈಗ ಪರದಾಡುತ್ತಿದೇವೆ,
ಸಾಹಿತ್ಯ–ಸಂಸ್ಕಾರವನ್ನು,
ಉಳಿಸುವ ನಾವೆಲ್ಲಾ ಒಂದಾಗಿ.....

-ಕ.ಸು.ಶ್ರೀ

## ಭಾರತಾಂಬೆ

ಭಾರತೀಯರ ಪ್ರೀತಿಯ ಮಾತೆ,
ಸ್ನೇಹ–ಸೌಹಾರ್ದತೆಯ ಸುಚರಿತೆ,
ಅನಂತದಲ್ಲಿ ಪ್ರಾವಿಣ್ಯತೆ,
ಹಚ್ಚ ಹಸಿರಿನ ದೇವತೆ...

ಏಕತೆಯಲ್ಲಿನ ನೈಜತೆ,
ರವಿವರ್ಮನ ಕೌಶಲ್ಯತೆ,
ಸಿಹಿ ಜೇನಿನ ಮಧುರತೆ,
ದುಂಭಿಯ ಜೇನ್‌ಕೃತಿ....

ಕರುಣೆಯ ಓ ಮಮತಾಮಯೆ,
ಸಾಹಿತ್ಯದ ಸುಸಂಸ್ಕೃತಿ.
ಸಾಗಿತಿಹ ಜನಪದ ಸಾಹಿತ್ಯದಲ್ಲಿ,
ಸಾಗುತಿಹುದು ಶಾಂತಿಯ ಏಕತೆ.....

-ಕ.ಸು.ಶ್ರೀ

## ಯಥಾರಾಜ

ಯಥಾ ರಾಜ, ತಥಾ ಪ್ರಜಾ।
ಲೋಕಸಭೆ, ವಿಧಾನಸಭೆಗಳಲ್ಲಿ
ಸದಾ ಗದ್ದಲ।
ಗ್ರಾಮ ಪಂಚಾಯತುಗಳು
ಹಿಂದೆ ಬಿದ್ದಿಲ್ಲ, ಅನುಕರಣೆಯಲ್ಲಿ
ಸದಾ ಗೊಂದಲ

## ಕೈಕೊಡುವ ವಿದ್ಯುತ್

ಶೋಭಾಳ ಶೋಭೆಗೆ
ವಿದ್ಯುತ್ ಸದಾ
ಬೆಳಗುತ್ತಿತ್ತು।
'ಕೈ' ಸರಕಾರ
ಬಂದದ್ದೇ ತಡ
ವಿದ್ಯುತ್ 'ಕೈ' ಕೊಟ್ಟಿತ್ತು॥

## ವ್ಯಾಮೋಹ

ಮೋಹಗಳಲ್ಲಿ
ದೊಡ್ಡ ಮೋಹ
ಕುರ್ಚಿಯ ಮೋಹ।
ಕುಳಿತರೆ
ಬಿಡದೀ ಮೋಹ।
ಮಾಯೆಗೆ
ಬಲಿ ಈ ದೇಹ॥

## (ಆ)ಶ್ರಮ

ತಂದೆಯ ಸಾಕುವ
ಆ–ಶ್ರಮ।
ಮಗ
ಸೇರಿಸಿದ ತಂದೆಯ
ಆಶ್ರಮ॥

## ಬೇಕೇ ಆಡಂಬರ

ನಡೆಯುತಿಹುದು ಎಲ್ಲೆಲ್ಲೂ
ಜಾತ್ರೋತ್ಸವಗಳು।
ಮೇರೆ ಮೀರಿದ ವೈಭವಗಳು
ಹಣವನ್ನೆ ಸುಡುತಲಿಹ
ಬೆಂಡು ಬತ್ತಾಸುಗಳು।
ಸಿಡಿಮದ್ದುಗಳು।
ಮರುಳು ಮಾಡುತಿಹ
ಆಟ, ನೋಟಗಳು
ವಿದ್ಯುದಲಂಕಾರಗಳು
ಎಲ್ಲೆಲ್ಲೂ ಕಾಣುತಿದೆ
ಮಿತಿ ಮೀರಿದಾಡಂಭರಗಳು॥

ಕೂಳು ತುತ್ತಿಗೆ ಬಳಲುತಿಹ
ನೂರಾರು ಭಿಕ್ಷುಕರು
ರೋಗದಿಂ ನರಳುತಿಹ
ಸಹಸ್ರಾರು ಬಡರೋಗಿಗಳು।
ಅಂಗವಿಕಲರು।
ಕಣ್ಬಾಯಿ ಬಿಟ್ಟು ನೋಡುತಿಹರು।
ಹೊಟ್ಟೆ ಸವರುತಿಹರು।
ಕಣ್ಣೀರು ಹರಿಸುತಿಹರು॥

- ಗೋ.ರಾ.ಕೆ. ಕಡಬ

## ಭೂಮಿ ತಾಯಿ

ಒಂದು ಸುಂದರ ಮುಂಜಾನೆ ನಿದ್ದೆಯಿಂದೆದ್ದಾಗ
ಎಲ್ಲವೂ ಕನಸಿನಂತೆ ಭಾಸವಾಯಿತು.
ಅಲ್ಲಿ ಮೈತುಂಬಾ ಹೂವು ತುಂಬಿ ನಿಂತ
ಮಾಮರದ ಕೋಗಿಲೆಯ ಕುಹೂಧ್ವನಿ
ಇಬ್ಬನಿಯಿಂದ ತೊಯ್ದು ಮುತ್ತಿನಂತೆ
ಹೊಳೆಯುತ್ತಿರುವ ಪುಟ್ಟ ಪುಟ್ಟ ಗಿಡಗಳು
ದುಂಡಗೆ ಕೆಂಪಗೆ ಮಿನುಗುತ್ತಿರುವ
ಬಾಲಸೂರ್ಯ
ತೆನೆಗಳನ್ನು ತೂಗಾಡಿಸುತ್ತಾ ಗೊಂಚಲು
ಗೊಂಚಲಾಗಿರುವ ಭತ್ತ
ರೆಕ್ಕೆ ಬಿಚ್ಚಿ ಈ ಆಕಾಶ ನಮ್ಮದು
ಎಂಬಂತೆ ಹಾರುತ್ತಿರುವ ಹಕ್ಕಿ
ಜುಳು ಜುಳು ಹರಿಯುತ್ತಾ ಕಣ್ಮನ
ತಣಿಸುವ ಹಾಲು ನೊರೆಯ ನದಿ
ಗರಿಗಳನ್ನು ಬೀಸುತ್ತಾ
ಆಡುತ್ತಿರುವ ತೆಂಗು
ನೀರಲ್ಲಿ ಕಾಲಿಟ್ಟರೆ ಮುದ್ದಾಡುವ
ಚಿಕ್ಕ ಮೀನುಗಳು
ದೂರದ ದೇವಸ್ಥಾನದ ಗಂಟೆಯ ಸದ್ದು
ಘಮ್ಮೆನ್ನುವ ಹೂವುಗಳನ್ನು ಅರಳಿಸುತ್ತಾ
ನಿಂತ ಸುಂದರ ಗಿಡಗಳು
ತಣ್ಣನೆ ಗಾಳಿಯ ನಿನಾದಕ್ಕೆ
ತಲೆಯಾಡಿಸುತ್ತಾ ನಿಂತ ಬಾಳೆಗಿಡಗಳು
ಮುಸುಕಿದ ಮಂಜನ್ನು ಮೆಲ್ಲಮೆಲ್ಲನೆ
ಕರಗಿಸುತ್ತಿರುವ ಎಳೆಬಿಸಿಲು
ಪ್ರಕೃತಿಯ ಸೊಬಗಿಗೆ ತನ್ಮಯರಾಗದಿರುವವರುಂಟೇ?
ಮುಂದಿನದು ವಿಶಾಲ ಬಿಸಿಲಿನ ಹಗಲು

-ರಶ್ಮಿ ಉಳಿಯಾರು

## ಶ್ರೀ ಶಂಕರ ಪ್ರತಿಷ್ಠಾನ, ಶ್ರೀ ಶಂಕರ ಮಠ, ಕೋಟೇಕಾರು

# ಗೌರಿಹಬ್ಬ ಹಾಗೂ ಗಣೇಶ ಹಬ್ಬದ ಆಚರಣೆ

ತಾ.16-09-2015ನೇ ಬುಧವಾರದಂದು ಗೌರಿಹಬ್ಬದ ಹಾಗೂ ಮರುದಿನ ಗಣೇಶ ಚತುರ್ಥಿಯ ಆಚರಣೆಯು ಕೋಟೇಕಾರಿನ ಶ್ರೀ ಶೃಂಗೇರಿ ಶಾರದಾ ಪೀಠದ ಶಾಖೆಯಲ್ಲಿ ಮಠದ ಹಾಗೂ ಶ್ರೀ ಶಂಕರ ಪ್ರತಿಷ್ಠಾನದ ಜಂಟಿ ಆಶ್ರಯದಲ್ಲಿ ನಡೆಯಿತು. ತಾ.16ರ ಬೆಳಿಗ್ಗೆ ನಡೆದ ಉದ್ಘಾಟನಾ ಸಮಾರಂಭದಲ್ಲಿ ಡಾ। ಹರಿಪ್ರಸಾದ್ ತುದಿಯಡ್ಕ, ಅನುವಂಶಿಕ ಆಡಳಿತ ಮೊಕ್ತೇಸರರು, ಶ್ರೀ ಚೆನ್ನಕೇಶವ ದೇವಸ್ಥಾನ ಸುಳ್ಯ ಇವರು ಅಧ್ಯಕ್ಷರಾಗಿದ್ದರು. ಉದ್ಘಾಟನೆಯನ್ನು ಕರ್ನಾಟಕ ಧಾರ್ಮಿಕ ಪರಿಷತ್ತಿನ ಸದಸ್ಯರಾದ ಶ್ರೀ ಎನ್.ಕೆ.ಜಗನ್ನಿವಾಸರಾಯರು ದೀಪ ಬೆಳಗಿಸಿ ನೆರವೇರಿಸಿದರು. ಅತಿಥಿಗಳಾಗಿ ಉಡುಪಿಯ ಡಾ। ವೈ.ಸುದರ್ಶನ ರಾವ್, ಎಸ್.ಡಿ.ಎಂ ಲಾ ಕಾಲೇಜು ಮಂಗಳೂರಿನ ಪ್ರಾಧ್ಯಾಪಕರಾದ ಶ್ರೀ ಸಾಯಿನಾಥ ಮಲ್ಲಿಗೆಮಾಡು, ಶ್ರೀ ಹರಿಶ್ಚಂದ್ರ ಗಟ್ಟಿ, ಸೋಮೇಶ್ವರದ ನಿವೃತ್ತ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸರೋಜಾ ಭಟ್ ಆಗಮಿಸಿದ್ದರು. ಡಾ। ಕಬ್ಬಿನಾಲೆ ಬಾಲಕೃಷ್ಣ ಭಾರದ್ವಾಜ್ ಇವರು ಧಾರ್ಮಿಕ ಉಪನ್ಯಾಸ ನೀಡಿದರು. ಶ್ರೀ ಗೌರಿದೇವಿಯ ಹಾಗೂ ಶ್ರೀ ಗಣೇಶನ ವಿಗ್ರಹಗಳನ್ನು ಪ್ರತಿಷ್ಠಾಪಿಸಿ ಪೂಜಿಸಲಾಯಿತು. ಲಲಿತಾ ಹೋಮ ಹಾಗೂ ಶ್ರೀ ಗಣಪತಿ ಅಥರ್ವಶೀರ್ಷ ಹೋಮಗಳನ್ನು ನೆರವೇರಿಸಲಾಯಿತು. ಶ್ರೀ ಬೊಳ್ಳಾವ ವಿದ್ಯಾಶಂಕರ ಹಾಗೂ ಇತರರಿಂದ ಕರ್ನಾಟಕ ಸಂಗೀತ ಕಾರ್ಯಕ್ರಮವಿತ್ತು. ತಾ.17-09-2015ನೇ ಗುರುವಾರ ಸಂಜೆ ಸೋಮೇಶ್ವರ ಕ್ಷೇತ್ರದ ರುದ್ರಪಾದದ ಬಳಿ ಸಮುದ್ರದಲ್ಲಿ ವಿಗ್ರಹಗಳ ಜಲಸ್ತಂಬನದೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.ಶ್ರೀ ಎ. ಶಿವರಾವ್ ಇವರು ಶಂಕರ ಪ್ರತಿಷ್ಠಾನದ ಗೌರವಾಧ್ಯಕ್ಷರು. ಶ್ರೀ ಎಂ.ಆರ್.ವಾಸುದೇವ ಇವರು ಅಧ್ಯಕ್ಷರು ಹಾಗೂ ಶ್ರೀ ಕೆ.ಸತೀಶ್ ಕುಮಾರ್ ಇವರು ಕಾರ್ಯದರ್ಶಿಗಳು. ಶ್ರೀ ಸತ್ಯಶಂಕರ ಬೊಳ್ಳಾವರು ಕೋಟೇಕಾರು ಶಾಖೆಯ ಧರ್ಮಾಧಿಕಾರಿಗಳಾಗಿದ್ದಾರೆ.


**ಆಮಂತ್ರಣ**

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ

**ಪಡುಬಿದ್ರಿ, ಉಡುಪಿ ಜಿಲ್ಲೆ - 574 111.**

ಭಕ್ತಾಭಿಮಾನಿಗಳೇ,

ಸ್ವಸ್ತಿ ಶ್ರೀ ಮನ್ಮಥ ನಾಮ ಸಂವತ್ಸರದ ಆಶ್ವೀಜ ಮಾಸ ಶುದ್ಧ ಪಾಡ್ಯದಿಂದ ನವಮಿ ಪರ್ಯಂತ, ಅಂದರೆ ದಿನಾಂಕ 13-10-2015ರಿಂದ 22-10-2015ರ ತನಕ **ಶ್ರೀ ದೇವಳದ ಪ್ರಸನ್ನ ಪಾರ್ವತಿ ದೇವಿಯ ಸನ್ನಿಧಾನದಲ್ಲಿ ಶ್ರೀ ಶರನ್ನವರಾತ್ರಿ** ಮಹೋತ್ಸವದ ಅಂಗವಾಗಿ **ವಿಶೇಷ ಪೂಜೆ**ಯು ಸಂಜೆ 7-30ಕ್ಕೆ ಜರಗಲಿರುವುದು.

ಮತ್ತು ದಿನಾಂಕ 21-10-2015ರ ಬುಧವಾರದಂದು

## ಶ್ರೀ ಚಂಡಿಕಾಯಾಗವು

ಸಂಪನ್ನಗೊಳ್ಳಲಿರುವುದು.

ಶ್ರೀ ಗುರುದೇವತಾನುಗ್ರಹದಿಂದ ನೆರವೇರಲಿರುವ ಈ ದೇವತಾ ಕಾರ್ಯಗಳಲ್ಲಿ ತಾವೆಲ್ಲರೂ ಭಾಗವಹಿಸಿ, ತನು-ಮನ-ಧನಗಳಿಂದ ಸಹಕರಿಸಿ, ಶ್ರೀದೇವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ,

**- ವ್ಯವಸ್ಥಾಪನಾ ಮಂಡಳಿ ಮತ್ತು ಅರ್ಚಕರು.**

ವಿ.ಸೂ. : 1. ಬೆಳಿಗ್ಗೆ 11-30ಕ್ಕೆ ಶ್ರೀ ಯಾಗದ ಪೂರ್ಣಾಹುತಿ ಮತ್ತು ಮಧ್ಯಾಹ್ನ ಗಂಟೆ 1-00ಕ್ಕೆ ಅನ್ನಸಂತರ್ಪಣೆ.
2. ಶ್ರೀ ಯಾಗದ ಪೂರ್ಣ ಪ್ರಾಯೋಜಕರು ರೂ.10,000/-ವನ್ನು ಪಾವತಿಸಿ ಪಾಲ್ಗೊಳ್ಳಬಹುದು.
3. ಶ್ರೀ ಯಾಗದಲ್ಲಿ ಸಾಮೂಹಿಕವಾಗಿ ಭಾಗವಹಿಸುವವರು ರೂ.150/-ನ್ನು ಪಾವತಿಸಬೇಕು.
4. ಶ್ರೀ ಯಾಗದ ಪೂರ್ಣಾಹುತಿ ದ್ರವ್ಯಗಳನ್ನು ಮುಂಗಡವಾಗಿ ನೀಡಬಹುದು.
5. ಶ್ರೀ ಯಾಗದ ಹತ್ತು ಜನರ ಅನ್ನಸಂತರ್ಪಣೆ ರೂ.1,000/- ಪಾವತಿಸಿ ಪಾಲ್ಗೊಳ್ಳಬಹುದು.
6. ಶ್ರೀ ಯಾಗದ ಅನ್ನಸಂತರ್ಪಣೆಗೆ ಹೊರೆ ಕಾಣಿಕೆಗಳನ್ನು ನೀಡಬಹುದು.
7. ಪ್ರತೀ ದಿನದ ವಿಶೇಷ ಪೂಜೆಗೆ ರೂ.300/-ನ್ನು ಪಾವತಿಸಿ ಪಾಲ್ಗೊಳ್ಳಬಹುದು.


# ವೈದ್ಯಕೀಯ ವೇದಿಕೆ-ಆರೋಗ್ಯ ಮಾಹಿತಿ

ಡಾ। ವೈ. ಸುದರ್ಶನ ರಾವ್

**ಸ್ವಚ್ಛತೆ ಹಾಗೂ ಆರೋಗ್ಯ**

(...ಮುಂದುವರೆದುದು )

ಪರಿಸರದ ಸ್ವಚ್ಛತೆಯ ವಿಷಯದಲ್ಲಿ ಅತ್ಯಂತ ನಿರ್ಲಕ್ಷಿತವಾದ್ದುದೆಂದರೆ ನಮ್ಮ ಸುತ್ತಲಿನ ವಾತಾವರಣದ ಸ್ವಚ್ಛತೆ. ವಾತಾವರಣವೆಂದರೆ ಭೂಮಿಯ ಮೇಲೆ ನಮ್ಮನ್ನು ಆವರಿಸುವ ಗಾಳಿ ಬಿಸಿಲು ಇತ್ಯಾದಿಯನ್ನೊಳಗೊಂಡಿರುವ ಆವರಣವಾಗಿದೆ. ಇದರಲ್ಲಿರುವ ಕಶ್ಮಲಗಳು ಬರಿಗಣ್ಣಿಗೆ ಗೋಚರಿಸುವುದಿಲ್ಲವಾದುದರಿಂದ ಈ ನಿರ್ಲಕ್ಷ್ಯ ಸಹಜವೂ ಆಗಿದೆ. ಆದರೆ ವಾತಾವರಣದ ಸ್ವಚ್ಛತೆಯು ಆರೋಗ್ಯದ ಮೇಲೆ ಗಂಭೀರವಾದ ಹಾಗೂ ದೂರಗಾಮೀ ಪರಿಣಾಮಗಳನ್ನು ಬೀರಬಲ್ಲುದಾಗಿದೆ.

ವಾತಾವರಣದಲ್ಲಿ ಮುಖ್ಯವಾಗಿರುವುದು ಗಾಳಿ. ನಮಗೆ ಈ ಗಾಳಿಯಲ್ಲಿ ಮುಖ್ಯವಾಗಿ ಬೇಕಾದುದು ಆಮ್ಲಜನಕವಾದರೂ ಅದರಲ್ಲಿ ಜಲಜನಕ, ಸಾರಜನಕ , ಕಾರ್ಬನ್ ಮೊನಾಕ್ಸೈಡ್, ಕಾರ್ಬನ್ ಡಯಾಕ್ಸೈಡ್ (ಹೊಗೆ), ಗಂಧಕ, ಧೂಳು ಹಾಗೂ ನೀರಾವಿ ಇರುತ್ತದೆ.

ಗಾಳಿಯಲ್ಲಿ ಧೂಳು ಹಾಗೂ ಹೊಗೆ ಉಸಿರಾಟದ ಖಾಯಿಲೆಗಳನ್ನು ತರುತ್ತವೆ. ಅಲರ್ಜಿ ಸಂಬಂಧಿತ ಖಾಯಿಲೆಗಳಿಗೂ ಇದು ಹೇತು. ಗಾಳಿ ಎಷ್ಟು ಮಲಿನವಾಗಿದೆ ಎಂಬುದು ಬರಿಗಣ್ಣಿಗೆ ತಿಳಿಯುವುದಿಲ್ಲವಾದುದರಿಂದ ಇದನ್ನು ಗಾಳಿಯಲ್ಲಿನ ಗಂಧಕದ ಮಟ್ಟ ಅಳೆದು ತಿಳಿಯುತ್ತಾರೆ. ಧೂಳು ಹಾಗೂ ಗಂಧಕ ಇರುವ ಮಲಿನ ಗಾಳಿಯ ಸೇವನೆಯಿಂದ ಕ್ಯಾನ್ಸರ್ ಖಾಯಿಲೆ ಬರುವ ಸಾಧ್ಯತೆಯು ಹಲವು ಪಟ್ಟು ಹೆಚ್ಚಾಗುತ್ತದೆ.

ಮೋಟಾರು ವಾಹನಗಳ ಹಾಗೂ ಫ್ಯಾಕ್ಟರಿಗಳ ಹಾಗೂ ವಸ್ತುಗಳನ್ನು ಸುಟ್ಟ ಹೊಗೆಯಿಂದ ಗಾಳಿ ಮಲಿನವಾಗುವುದು ಮಾತ್ರವಲ್ಲ ಅವು ವಾತಾವರಣದ ಉಷ್ಣತೆಯನ್ನೂ ಹೆಚ್ಚಿಸುತ್ತವೆ. ಮರಗಿಡಗಳ ಸಂಖ್ಯೆ ಕಡಿಮೆಯಾದಂತೆ ಗಾಳಿ ಶುಷ್ಕ (ಬಾಷ್ಪೀಭವನ ಇಲ್ಲದಿರುವುದರಿಂದ)ವಾಗುತ್ತದೆ ಹಾಗೂ ಉಷ್ಣತೆ ಹೆಚ್ಚುತ್ತದೆ.

ವಾತಾವರಣದಲ್ಲಿರುವ ಕೆಲವು ತರಂಗಗಳು ಹಾಗೂ ವಿಕಿರಣಗಳು ನಮ್ಮ ದೇಹದ ಮೇಲೆ ಪ್ರಭಾವ ಬೀರುತ್ತವೆ. ಈ ತರಂಗಗಳಲ್ಲಿ ಮುಖ್ಯವಾದುದು ಶಬ್ದ ತರಂಗ. ಅತಿಯಾದ ಶಬ್ದದಿಂದ ಶ್ರವಣದೋಷ ಉಂಟಾಗುತ್ತದೆ. ಅತಿಯಾದ ಶಬ್ದದಿಂದ ಉಂಟಾಗುವ ಮಾನಸಿಕ ಕಿರಿಕಿರಿಯನ್ನು ಎಲ್ಲರೂ ಅನುಭವಿಸಿರಬಹುದು.

ಇನ್ನು ಶಬ್ದಾತೀತ ತರಂಗಗಳು ಹಾಗೂ ವಿಕಿರಣಗಳ ವಿಷಯಕ್ಕೆ ಬರೋಣ. ನೂರಾರು ತರಂಗಗಳು ಹಾಗೂ ವಿಕಿರಣಗಳು ಬಾಹ್ಯಾಕಾಶದಿಂದ ನಮ್ಮ ವಾತಾವರಣವನ್ನು ಪ್ರವೇಶಿಸುತ್ತವೆ. ಭೂಮಿಯಲ್ಲಿರುವ ಅನೇಕ ವಸ್ತುಗಳೂ ಮುಖ್ಯವಾಗಿ ಶಿಲೆ ಕಲ್ಲು, ಲೋಹ ಹಾಗೂ ಕಾಂಕ್ರೀಟು ಕಟ್ಟಡಗಳು ವಿಕಿರಣವನ್ನು ಸೂಸುತ್ತವೆ. ನಾವು ಉಪಯೋಗಿಸುವ ಮೊಬೈಲು, ಟಿವಿಯಿಂದ ಹಿಡಿದು ಎಲ್ಲಾ ಇಲೆಕ್ಟ್ರಾನಿಕ್ ಪರಿಕರಗಳು ವಿಕಿರಣಗಳನ್ನು ಹಾಗೂ ತರಂಗಗಳನ್ನು ಸೂಸುತ್ತವೆ. ಒಂದು ರೀತಿಯಲ್ಲಿ ಈ ಆಧುನಿಕ ಯುಗದಲ್ಲಿ ನಾವು ವಿಕಿರಣ ಹಾಗೂ ತರಂಗಗಳಿಂದಲೇ ಸುತ್ತುವರಿಯಲ್ಪಟ್ಟಿದ್ದೇವೆ ಎನ್ನಬಹುದು. ವಾಯುಮಾಲಿನ್ಯದಿಂದಾಗಿ ಹಾಗು ಗಿಡಮರಗಳ ಸಂಖ್ಯೆ ಕ್ಷೀಣಿಸುತ್ತಿರುವುದರಿಂದ ಭೂಮಿಯ ಓಝೋನ್ ಪದರವು ಹಾನಿಗೊಂಡು ಹೆಚ್ಚು ಹೆಚ್ಚು ತರಂಗಗಳು ಹಾಗೂ ವಿಕಿರಣಗಳು ನಮ್ಮ ವಾತಾವರಣವನ್ನು ಪ್ರವೇಶಿಸುತ್ತಿವೆ.

ಕೆಲವು (ಎಲ್ಲವೂ ಅಲ್ಲ) ವಿಕಿರಣಗಳು ಹಾಗೂ ತರಂಗಗಳು ನಮಗೆ ಕ್ಯಾನ್ಸರ್‌ಖಾಯಿಲೆ ತರುವ ಸಾಧ್ಯತೆಯು ಈಗಾಗಲೆ ಖಚಿತವಾಗಿರುವ ವಿಷಯವಾಗಿದೆ. ಹಾಗೆಯೇ ಇವುಗಳು ನಮ್ಮ ವಂಶವಾಹಿ (ಜೀನ್)ಯ ರಚನೆಯಲ್ಲಿ ಕೆಲವು ಅನಪೇಕ್ಷಿತ ಬದಲಾವಣೆಗಳನ್ನು ತಂದಿಕ್ಕಿ ಹಲವಾರು ಖಾಯಿಲೆಗಳನ್ನು ತರುತ್ತವೆ ಎಂಬುದೂ ಖಚಿತವಾಗಿರುವ ವಿಷಯವಾಗಿದೆ. ಸ್ವಾರಸ್ಯವೇನೆಂದರೆ ನಾವು ದಿನನಿತ್ಯವೂ ಉಪಯೋಗಿಸುವ ವಸ್ತುಗಳಿಂದ ಹೊರಸೂಸುವ ವಿಕಿರಣಗಳು ಎಷ್ಟರ ಮಟ್ಟಿಗೆ ನಿರಪಾಯಕಾರಿ ಎಂಬುದು ತಿಳಿದಿಲ್ಲ ಹಾಗೂ ಈವಾಗ ನಿರಪಾಯಕಾರಿ ಎಂದು ಅಂದುಕೊಂಡಿರುವವು ಮುಂದೆ ಅಪಾಯಕಾರಿ ಎಂಬ ವರದಿ ಬರಬಹುದೇ ಎಂಬುದು ತಿಳಿದಿಲ್ಲ. ಹಾಗಾಗಿ ಈ ವಿಕಿರಣಗಳು ಹಾಗು ತರಂಗಗಳನ್ನು ಒಂದು ಮಿತಿಯಲ್ಲಿಡುವುದು ಅಗತ್ಯ.

ವಾತಾವರಣದ ಸ್ವಚ್ಛತೆಯನ್ನು ಕಾಪಾಡುವುದರ ವಿಶಿಷ್ಟತೆಯೇನೆಂದರೆ ಇದು ಸಾಂಘಿಕವಾಗಿ, ಬದ್ಧತೆಯಿಂದ, ಶಿಸ್ತಿನಿಂದ ಎಲ್ಲರೂ ಕೈಗೂಡಿಸಿ ಮಾಡಬೇಕಾದ ಕೆಲಸವಾಗಿದೆ. ಘನತ್ಯಾಜ್ಯಗಳ ನಿರ್ವಹಣೆಯಂತೆ ಅಗತ್ಯವಿದ್ದಾಗ ಮಾತ್ರ ಬಳಕೆ, ಆದಷ್ಟು ಕಡಿಮೆ ಬಳಕೆ ಹಾಗೂ ಕನಿಷ್ಟ ತ್ಯಾಜ್ಯ ಉತ್ಪತ್ತಿಯಾಗುವ ವಸ್ತುವಿನ ಬಳಕೆ ಎಂಬ ಸೂತ್ರವನ್ನು ಇಲ್ಲೂ ಅಳವಡಿಸಿಕೊಳ್ಳಬೇಕು. ಉತ್ಪತ್ತಿಯಾದ ತ್ಯಾಜ್ಯವನ್ನು (ಮುಖ್ಯವಾಗಿ ಕಾರ್ಖಾನೆ) ವಾತಾವರಣಕ್ಕೆ ಬಿಡುವ ಮುಂಚೆ ಸಂಸ್ಕರಿಸಬೇಕು. ಮೋಟಾರುವಾಹನಗಳನ್ನು ಕಾಲಕಾಲಕ್ಕೆ ತಪಾಸಣೆ ಮಾಡಿ ಅದರ ಹೊಗೆಯಲ್ಲಿರುವ ಪ್ರದೂಷಣ ವಸ್ತುಗಳು ಕನಿಷ್ಟಮಟ್ಟದಲ್ಲಿರುವಂತೆ ನೋಡಿಕೊಳ್ಳಬೇಕು. ಸಾಧ್ಯವಿದ್ದಷ್ಟು ಮರಗಿಡಗಳನ್ನು ಬೆಳೆಸುವುದನ್ನು ಮರೆಯಬಾರದು.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322**


*Krishna Rao*

Ph : 2520652
Mob. : 9902029048

**KISHAN**



**Studio & Video**



**Indoor Photography & Port Folio Photography, Video & Mixing, Lamination**

MAIN ROAD, MAJOOR & BANTAKAL.



**ಪ್ರೊ : ಸುಧಾಕರ್ ರಾವ್ ಬೆಳ್ಳೆ**



## ಶ್ರೀಮೂತಾ ಇಲೆಕ್ಟ್ರಾನಿಕ್ಸ್

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ

ಭೇಟಿ ನೀಡಿ....

ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103

ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ, ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093

## ಕೂಡ್ಲು ಅಷ್ಟಮಿ - ಪುಸ್ತಕ ಬಿಡುಗಡೆ



ಕೂಡ್ಲು ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಅಷ್ಟಮಿ ಉತ್ಸವ ಸಂದರ್ಭದಲ್ಲಿ ಕೂಡ್ಲು ಶಾಲೆಯ ನಿವೃತ್ತ ಅಧ್ಯಾಪಿಕೆ ಲೀಲಾ ಟೀಚರ್‌ರವರ ಕೃತಿ ‘‘ಗಂಗೇಚ ಯಮುನೇಚ’’ ವನ್ನು ದೇವಸ್ಥಾನದ ತಂತ್ರಿ ಉಳಿಯ ವಿಷ್ಣು ಅಸ್ರರವರು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ದೇವಸ್ಥಾನದ ಮೊಕ್ತೇಸರ ಶ್ರೀ ಕೆ. ಜಿ.ಶ್ಯಾನುಭೋಗ್ ಮುಖ್ಯಅತಿಥಿಗಳಾಗಿದ್ದರು.

## ಶ್ರೀಯುತ ಪಿ.ಎನ್. ಗಣೇಶ್‌ರವರಿಗೆ ಪದೋನ್ನತಿ

ನಮ್ಮ ಸಮಾಜದ ದಿವಂಗತ ಪಡುಬಿದ್ರಿ ನಾಗೇಶ್ ರಾವ್ ಮತ್ತು ದಿವಂಗತ ಎಚ್. ರಮಾಬಾಯಿಯವರ ಪುತ್ರ ಶ್ರೀ ಪಿ.ಎನ್. ಗಣೇಶ್ (ಗಣೇಶ್ ರಾವ್) ಇವರಿಗೆ ದಿನಾಂಕ 03-09-2015ರಂದು ಇಲಾಖೆಯು ಆರಕ್ಷಕ ಉಪನಿರೀಕ್ಷಕರಿಂದ ಆರಕ್ಷಕ ನಿರೀಕ್ಷಕರಾಗಿ, ಪಿ ಎಸ್.ಐ.ಯಿಂದ ಪೋಲಿಸ್ ಇನ್‌ಸ್ಪೆಕ್ಟರ್ ಆಗಿ ಪದೋನ್ನತಿ ನೀಡಿ ಲೋಕಾಯುಕ್ತ ಸ್ಪೆಶಲ್ ಇನ್‌ವೆಸ್ಟಿಗೇಶನ್ ಟೀಮ್ (S.I.T.) ಗಣಿ ಅಪರಾಧ ಪತ್ತೆಗಾಗಿ ವಿಶೇಷ ಅಧಿಕಾರಿಯಾಗಿ ನಿಯೋಜಿಸಿದೆ.

ಇವರು 32 ಬಾರಿ ವರ್ಗಾವಣೆಗೊಂಡು ತುಮಕೂರು ಜಿಲ್ಲೆಯ ಹುಳಿಯಾರು ಎಂಬ ಊರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಇವರ ಪ್ರಾಮಾಣಿಕತೆಯನ್ನು ನೋಡಿ ಓ.ಓ.ಡಿ ಆಧಾರದ ಮೇಲೆ ಬೆಂಗಳೂರು ಜಿಲ್ಲೆಯ ಹೊಸಕೋಟೆ ಠಾಣೆಗೆ ಒಂದು ತಿಂಗಳ ಹಿಂದೆ ವರ್ಗಾವಣೆ ಮಾಡಿದ್ದರು. ಈ ಒಂದು ತಿಂಗಳ ಅವಧಿಯಲ್ಲಿ ಶ್ರೀಯುತರು 3.6 ಕೋಟಿ ಬೆಲೆಯ ಐ.ಟಿ.ಸಿ ಫ್ಯಾಕ್ಟರಿಯ ಸಿಗರೇಟು ದರೋಡೆ ಮಾಡಿದ ತುಳುನಾಡಿನ 11 ಮಂದಿಯನ್ನು ಬಂಧಿಸಿದ್ದೂ ಅಲ್ಲದೆ 3.25 ಲಕ್ಷ ರೂಪಾಯಿ ಬೆಲೆಯ 500/- ರೂಪಾಯಿ ಹಾಗೂ 1,000/- ರೂಪಾಯಿ ಮುಖ ಬೆಲೆಯುಳ್ಳ ನಕಲಿ ನೋಟುಗಳನ್ನು ಚಲಾವಣೆ ಮಾಡುತ್ತಿದ್ದ 5 ಜನರನ್ನು ಬಂಧಿಸಿದ್ದರು. ಅಲ್ಲದೆ ಪದೋನ್ನತಿ ಹೊಂದಿದ ದಿನದಂದೇ ಬೈಕು ಕಳ್ಳರನ್ನು ಬಂಧಿಸಿ 16 ಬೈಕು ಹಾಗೂ 3,000/- ರೂಪಾಯಿ ನಕಲಿ ನೋಟುಗಳನ್ನು ಚಲಾವಣೆ ಮಾಡುತ್ತಿದ್ದ ಒಬ್ಬನನ್ನು ಬಂಧಿಸಿ ಪಿ.ಎಸ್.ಐ. ಹುದ್ದೆಗೆ ವಿದಾಯ ಹೇಳಿರುತ್ತಾರೆ. ಇವರ ಸಾಧನೆಗೆ ಸಾಕ್ಷಿಯಾಗಿ ಪದೋನ್ನತಿ ಹೊಂದಿದ ಶ್ರೀ ಎ.ಎನ್.ಗಣೇಶರವರಿಂದ ಇನ್ನಷ್ಟು ಅಪರಾಧ ಪತ್ತೆಗಳಾಗಲಿ, ಇವರ ಕೀರ್ತಿಪತಾಕೆ ಇನ್ನಷ್ಟು ಎತ್ತರಕ್ಕೇರಲಿ ಎಂಬ ಹಾರೈಕೆ.

ಶ್ರೀಯುತರು ಈಗಾಗಲೇ ಎವರೆಸ್ಟ್ ಶಿಖರವನ್ನು ಏರಿದ ದಕ್ಷಿಣ ಭಾರತದ ಮೊದಲ ಆರೋಹಿಯಾಗಿರುತ್ತಾರೆ. ಅಲ್ಲದೆ 2016ರ ಮಾರ್ಚಿನಲ್ಲಿ ಸರಕಾರ ಅನುಮತಿಯನ್ನಿತ್ತಲ್ಲಿ ಪುನರಪಿ 28,662 ಅಡಿ ಎತ್ತರದ ಚುವುಲು ಹಾಗೂ 29,028 ಅಡಿ ಎತ್ತರದ ಎವರೆಸ್ಟ್ ಶಿಖರವನ್ನು ಏರಲು ಅಣಿಯಾಗಿರುತ್ತಾರೆ. ಈ ಎರಡು ಶಿಖರದ ಎತ್ತರ ಸುಮಾರು 58,000 ಅಡಿಗಳಷ್ಟು ಇವೆರಡನ್ನು ಏರಿ ವಿಶ್ವದಾಖಲೆ ಮಾಡಲು ಹೊರಟಿರುವ ಶ್ರೀ.ಪಿ.ಎನ್.ಗಣೇಶ್‌ರಿಗೆ ನಮ್ಮ ಸ್ಥಾನಿಕ ಸಮಾಜದ ಬಂಧುಗಳೆಲ್ಲರೂ ಶುಭ ಹಾರೈಸುವುದಲ್ಲದೆ ನಮ್ಮ ದೇಶದ ಕೀರ್ತಿ ಪತಾಕೆ ಉತ್ತುಂಗಕ್ಕೇರಲಿ ಎಂದು ಹಾರೈಸುವೆವು.

## ಹರಿದಾಸ ಶ್ರೀ ಮ.ನಾ.ಹೆಬ್ಬಾರರ ಹರಿಕಥೆ

ಉಡುಪಿ ಶ್ರೀಕೃಷ್ಣ ಮಠ ಮತ್ತು ಪರ್ಯಾಯ ಶ್ರೀ ಕಾಣಿಯೂರು ಮಠ ಇವರ ಆಶ್ರಯದಲ್ಲಿ ದಿನಾಂಕ 22-09-2015ರ ಮಂಗಳವಾರ ಅಪರಾಹ್ನ ಗಂಟೆ 5-00ಕ್ಕೆ ಶ್ರೀಕೃಷ್ಣ ಮಠದ ಶ್ರೀ ಮಧ್ವಮಂಟಪದಲ್ಲಿ ‘ಭಕ್ತ ಚಂದ್ರಹಾಸ’ ಎಂಬ ಕಥಾಭಾಗದ ಹರಿಕಥಾ ಕಾರ್ಯಕ್ರಮವು ಹರಿದಾಸ ಶ್ರೀ ಮ.ನಾ.ಹೆಬ್ಬಾರ, ಎಂ.ಎ.,ಬಿ.ಎಡ್. ಇವರಿಂದ ಜರಗಿತು. ಶ್ರೀ ಮಧ್ವೇಶ ಆಚಾರ್ಯ ಇವರು ಆರಂಭದಲ್ಲಿ ಸ್ವಾಗತಿಸಿ, ಕೊನೆಯಲ್ಲಿ ಧನ್ಯವಾದವಿತ್ತರು. ಶ್ರೀ ಹಾಲಾಡಿ ಕೃಷ್ಣ ಕಾಮತ್ ಇವರು ಕೀಬೋರ್ಡ್‌ನಲ್ಲಿಯೂ, ಶ್ರೀ ದೇವದಾಸ ಕೂಡ್ಲಿ ಇವರು ಮೃದಂಗದಲ್ಲಿಯೂ ಸಹಕರಿಸಿದ್ದರು. ಪರ್ಯಾಯ ಶ್ರೀ ಕಾಣಿಯೂರು ಶ್ರೀಗಳು ಕೊನೆಯಲ್ಲಿ ಮೂವರಿಗೂ ಶಾಲು, ಮಂತ್ರಾಕ್ಷತೆ-ಪ್ರಸಾದ, ನೆನಪಿನ ಕಾಣಿಕೆಗಳನ್ನಿತ್ತು ಹರಸಿದರು.

## ಸೋಣಡೊಂಜಿ ದಿನ - ಗೌರವಾರ್ಪಣೆ

ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ ಇದರ ಮಹಿಳಾ ವೇದಿಕೆಯ ವತಿಯಿಂದ ‘ಸೋಣಡೊಂಜಿ ದಿನ’ ಸಮಾರಂಭವನ್ನು ದಿನಾಂಕ 06-09-2015ನೇ ರವಿವಾರ ‘ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ’ದ ಸಭಾಂಗಣದಲ್ಲಿ ಆಚರಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ನಿವೃತ್ತ ಶಿಕ್ಷಕಿ ಶ್ರೀಮತಿ ಸತ್ಯವತಿ ಚಂದ್ರಶೇಖರ್‌ರಾವ್ ಇವರು ವಹಿಸಿದ್ದರು. ಮುಖ್ಯಅತಿಥಿಯಾಗಿ ನಂದಿಕೂರಿನ ನಾಟಿವೈದ್ಯೆ ಶ್ರೀಮತಿ ರತ್ನಮ್ಮ ಭಾಗವಹಿಸಿದ್ದರು. ನಮ್ಮ ಸಂಘದ ಮಹಿಳಾ ನಿರ್ದೇಶಕಿ ಶ್ರೀಮತಿ ಸೀತಾದೇವಿ ಭಾಸ್ಕರ್‌ರಾವ್, ಮಹಿಳಾ ವೇದಿಕೆಯ ಸಂಚಾಲಕಿ ಶ್ರೀಮತಿ ಶುಭಾ ಜನಾರ್ದನ ರಾವ್ ಹಾಗೂ ಅಧ್ಯಕ್ಷೆ ಶ್ರೀಮತಿ ವಿಜಯಾ ದೇವರಾಯ ಶರ್ಮ ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದೇವಳದಲ್ಲಿ ಪ್ರಾರ್ಥನೆ ಸಲ್ಲಿಸುವುದರೊಂದಿಗೆ, ವೇದಿಕೆಯಲ್ಲಿ ದೀಪ ಬೆಳಗಿಸಿ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಶ್ರೀಮತಿ ಗಾಯತ್ರಿ ರಾಜೇಂದ್ರ ರಾವ್, ಶ್ರೀಮತಿ ರೂಪ ಸುರೇಶ್ ರಾವ್ ಹಾಗೂ ಕುಮಾರಿ ತೇಜಸ್ವಿನಿ ಇವರ ಪ್ರಾರ್ಥನೆಯ ಬಳಿಕ ಶ್ರೀಮತಿ ಲಲಿತಾಂಬ ಯೋಗಾನಂದ ಶಾಸ್ತ್ರಿ ಇವರು ಎಲ್ಲರನ್ನೂ ಸ್ವಾಗತಿಸಿದರು. ಶ್ರೀಮತಿ ಸುಮಂಗಲಾ ನಯನಾಭಿರಾಮ ಸ್ವಾಮಿಯವರು ಮಹಿಳಾ ವೇದಿಕೆಯ ಕಾರ್ಯವೈಖರಿಯ ಸಂಪೂರ್ಣ ವರದಿ ನೀಡಿದರು. ಶ್ರೀಮತಿ ಸೀತಾದೇವಿ ಭಾಸ್ಕರ್‌ರಾವ್ ಇವರು ಸೋಣ ತಿಂಗಳ ಮಹತ್ವದ ಬಗ್ಗೆ ವಿವರಣೆ ನೀಡಿದರು. ಬಳಿಕ ಮಹಿಳಾ ವೇದಿಕೆಯ ಆರಂಭದಿಂದ ಈ ವರೆಗೆ ನಡೆದ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಉತ್ತಮ ಸಲಹೆ ನೀಡಿ ಪ್ರೋತ್ಸಾಹಿಸಿದ ಪಡುಬಿದ್ರಿಯ ಶ್ರೀಮತಿ ಲತಾ ವಾಸುದೇವ ರಾವ್, ಪಾದೆಬೆಟ್ಟಿನ ಶ್ರೀಮತಿ ಸುಮಿತ್ರಾ ಸುಬ್ರಾಯ ಶ್ಯಾನುಭಾಗ್, ನಂದಿಕೂರಿನ ಶ್ರೀಮತಿ ಸರೋಜಿನಿ ದೇವರಾವ್, ಫಲಿಮಾರಿನ ಶ್ರೀಮತಿ ವನಮಾಲ ವೆಂಕಟ್ರಾವ್, ಮುದರಂಗಡಿಯ ಶ್ರೀಮತಿ ಶಾಂಭವಿ ರಾವ್, ಪಡುಬಿದ್ರಿಯ ಶ್ರೀಮತಿ ಶಶಿಕಲಾ ರಾಮ ರಾವ್ ಹಾಗೂ ನಿವೃತ್ತ ಶಿಕ್ಷಕಿ ಶ್ರೀಮತಿ ಸತ್ಯವತಿ ಚಂದ್ರಶೇಖರ್ ರಾವ್ ಇವರನ್ನು ಸನ್ಮಾನಿಸಲಾಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಸನ್ಮಾನವೆಂದರೆ ನಿವೃತ್ತಿಯಲ್ಲ, ವೇದಿಕೆಯನ್ನು ಸರಿಯಾದ ಮಾರ್ಗದರ್ಶನದಲ್ಲಿ ನಡೆಸುವ ಹೆಚ್ಚಿನ ಜವಾಬ್ದಾರಿ ಕೂಡಾ ಇದೆ ಎಂದು ತಿಳಿಸಿದರು.

ಶ್ರೀಮತಿ ವಾಣಿ ಮಾಧವರಾವ್ ಇವರು ಧನ್ಯವಾದ ಸಮರ್ಪಣೆ ಮಾಡಿದರೆ ಶ್ರೀಮತಿ ಲಲಿತಾಂಬ ವೈ.ಶಾಸ್ತ್ರಿಯವರು ಕಾರ್ಯಕ್ರಮವನ್ನು ನಿರೂಪಿಸಿದರು. ಬಳಿಕ ಮಹಿಳಾ ವೇದಿಕೆಯ ಸದಸ್ಯೆಯರು ತಾವೇ ತಯಾರಿಸಿದ ಸೇವಿಗೆ, ಮೂಡೆ, ಹಲಸಿನ ಹಣ್ಣಿನ ಕಡುಬು, ಅರಸಿನ ಎಲೆಯ ಗಟ್ಟಿ, ಉಂಡೆ, ಪಾಯಸ ಮೊದಲಾದ 25 ಬಗೆಯ ಖಾದ್ಯಗಳಿಂದ ನೆರೆದ ಸಮಾಜ ಬಾಂಧವರಿಗೆ ಉಣಬಡಿಸಿದರು.

★★★★ ★★★★

ದಿನಾಂಕ 06-09-2015ನೇ ರವಿವಾರ ‘‘ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ’’ದಲ್ಲಿ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ ಇದರ ಸಭಾ ಕಾರ್ಯಕ್ರಮ ನಡೆಯಿತು.

ಕರ್ನಾಟಕ ಸರಕಾರದ ಧಾರ್ಮಿಕ ಪರಿಷತ್‌ನ ಸದಸ್ಯರಾಗಿ ಆಯ್ಕೆಗೊಂಡ ನಮ್ಮ ಸಮಾಜ ಬಾಂಧವರಾದ ಪುತ್ತೂರಿನ ಶ್ರೀಯುತ ಎನ್.ಕೆ. ಜಗನ್ನಿವಾಸ ರಾವ್ ಇವರನ್ನು ಗೌರವಿಸಲಾಯಿತು. ಸಮಾರಂಭದ ಅಧ್ಯಕ್ಷ ಸ್ಥಾನವನ್ನು ಪಡುಬಿದ್ರಿ ಸಂಘದ ಅಧ್ಯಕ್ಷರಾದ ಶ್ರೀಯುತ ಎಂ.ಕೆ.ಮೋಹನ್ ರಾವ್ ವಹಿಸಿದ್ದರು. ಸಂಘದ ಗೌರವಾಧ್ಯಕ್ಷರಾದ ಶ್ರೀಯುತ ಪಿ.ಬಿ. ವಾಸುದೇವ ರಾವ್, ಕಾರ್ಕಳ ಸಂಘದ ಅಧ್ಯಕ್ಷರಾದ ಶ್ರೀ ಮುರಳೀಧರ ಶರ್ಮ, ಸುರತ್ಕಲ್ ಸಂಘದ ಅಧ್ಯಕ್ಷರಾದ ಶ್ರೀ ಮಾಧವ ರಾವ್, ಪಡುಬಿದ್ರಿ ಸಂಘದ ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಎಸ್.ಜನಾರ್ಧನ ರಾವ್, ಮಹಿಳಾ ವೇದಿಕೆಯ ಅಧ್ಯಕ್ಷೆಯಾದ ಶ್ರೀಮತಿ ವಿಜಯ ದೇವರಾಯ ಶರ್ಮ ಇವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಭಾ ಕಾರ್ಯಕ್ರಮದಲ್ಲಿ ಮುಂಡ್ಕೂರಿನ ಶ್ರೀಮತಿ ರಮ್ಯಾ ಅರುಣ್‌ರಾವ್ ಇವರ ಪ್ರಾರ್ಥನೆಯ ಬಳಿಕ ಸಂಘದ ಕಾರ್ಯದರ್ಶಿ ಶ್ರೀ ಸುಧಾಕರ ಬೆಳ್ಳೆಯವರು ಸ್ವಾಗತಿಸಿದರು. ಶ್ರೀಯುತ ಎನ್.ಕೆ.ಜಗನ್ನಿವಾಸ ರಾಯರಿಗೆ ಗೌರವಾರ್ಪಣೆಯ ಬಳಿಕ ಈ ಬಾರಿ ಪಡುಬಿದ್ರಿ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಸತತವಾಗಿ ನಾಲ್ಕನೆಯ ಬಾರಿಗೆ ಅತ್ಯಧಿಕ ಮತಗಳಿಂದ ಆಯ್ಕೆಗೊಂಡ ನಮ್ಮ ಸಂಘದ ನಿರ್ದೇಶಕರಾದ ಶ್ರೀ ಶ್ರೀನಿವಾಸ ಶರ್ಮ ಇವರನ್ನು ಗೌರವಿಸಲಾಯಿತು. ಅಂತೆಯೇ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ವಿಜ್ಞಾನ ವಿಭಾಗದಲ್ಲಿ 93% ಅಂಕಗಳಿಸಿದ ಕುಂಜೂರಿನ ಶ್ರೀಯುತ ಸಿ.ಭಾಸ್ಕರ್‌ರಾವ್ ಮತ್ತು ಸುಧಾ ದಂಪತಿಗಳ ಪುತ್ರಿ ಕುಮಾರಿ ಜ್ಯೋತ್ಸ್ನಾಳನ್ನು ಗೌರವಿಸಿ ಪ್ರೋತ್ಸಾಹಿಸಲಾಯಿತು.

(9ನೇ ಪುಟಕ್ಕೆ...)

ಶ್ರೀ ಮಾತಾ ಜ್ಯೋತಿಷ್ಯಾಲಯ
ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.
ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.
ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

Buying and selling shares as easy as checking your emails
Sharekhan Online Trading Account Features:
⇨ Your bank account gets directly linked to trading account
⇨ Can do direct fund transfer from any of 11 leading banks
⇨ Choose your trading account, Classic, FastTrade, TradeTiger
⇨ Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142): for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)



ಎಮ್. ದೇವಾನಂದ್ ಭಟ್
Cell : 9845644556
9483913344
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಸಭಾ ಬೆಳ್ತಂಗಡಿ : ಗುರುದರ್ಶನ ಯಾತ್ರೆ

ದಿನಾಂಕ 13-09-2015ನೇ ರವಿವಾರ ನಮ್ಮ ಕುಲಗುರುಗಳಾದ ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರು ಮತ್ತು ತತ್‌ಕರಕಮಲ ಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತಿ ಸನ್ನಿಧಾನಂಗಳವರ ಚಾತುರ್ಮಾಸ ದೀಕ್ಷಾ ಕಾಲದಲ್ಲಿ ನಮ್ಮ ಸಭಾದ ವತಿಯಿಂದ ಗುರುಗಳ ಪಾದಪೂಜೆ, ಭಿಕ್ಷಾವಂದನೆ, ಆಶೀರ್ವಚನ, ಫಲಮಂತ್ರಾಕ್ಷತೆ ಪಡೆಯಲು ಬೆಳ್ತಂಗಡಿ ತಾಲೂಕಿನ ಸುಮಾರು 60 ಜನ ಸಮಾಜ ಬಾಂಧವರು ಬೆಳಿಗ್ಗೆ 6-30ಕ್ಕೆ ಧರ್ಮಸ್ಥಳದಿಂದ ಹೊರಟು ಮಾರ್ಗಮಧ್ಯೆ ನಾರಾವಿಯಲ್ಲಿ ಉಪಹಾರ ಸೇವಿಸಿ ಭಜನೆ, ಸಂಗೀತ, ದೇವರ ಸ್ತುತಿ ಮಾಡಿಕೊಂಡು ಶೃಂಗೇರಿ ತಲುಪಿ ದೇವರ ದರ್ಶನ ಮಾಡಿ ಪಾದಪೂಜೆ, ಆಶೀರ್ವಚನ, ಫಲಮಂತ್ರಾಕ್ಷತೆ, ಭೋಜನ ಮುಗಿಸಿ ಸಾಯಂಕಾಲ ಕ್ಷೇಮವಾಗಿ ಸ್ವಸ್ಥಾನ ತಲುಪಿದರು. ಸಭಾದ ಕಾರ್ಯದರ್ಶಿ ಶ್ರೀಪತಿ ರಾವ್ ಕೊಕ್ರಾಡಿ ದಂಪತಿಗಳು ಪಾದಪೂಜೆ ನೆರವೇರಿಸಿದರು. ಸಭಾದ ಪದಾಧಿಕಾರಿಗಳು, ನಿರ್ದೇಶಕರು, ಮಹಿಳಾ ವೇದಿಕೆಯ ಸದಸ್ಯೆಯರು ಭಾಗವಹಿಸಿದ್ದರು.

ಹಾಗೆಯೇ ತಾ.28-08-2015ನೇ ಶುಕ್ರವಾರ ಪುರೋಹಿತರಾದ ಅಜೇಯ ಹೆಬ್ಬಾರ್‌ರವರ ಪೌರೋಹಿತ್ಯದಲ್ಲಿ ಸಂಘದ ವತಿಯಿಂದ ಋಗುಪಾಕರ್ಮವನ್ನು ಆಚರಿಸಲಾಯಿತು. ಹಾಗೂ ಅದೇ ದಿನ ಸಂಜೆ ಶ್ರೀ ಅಜೇಯ ಹೆಬ್ಬಾರ್‌ರ ಪೌರೋಹಿತ್ಯದಲ್ಲಿ ವರಮಹಾಲಕ್ಷ್ಮೀ ಪೂಜೆಯನ್ನು ಆಚರಿಸಲಾಯಿತು. ಶ್ರೀ ಜಯನಾರಾಯಣ ದಂಪತಿಗಳು ಪೂಜಾ ಕರ್ತೃಗಳಾಗಿ ಭಾಗವಹಿಸಿದ್ದರು.

## ನಿಧನ

### ಬಿ.ಜಿ.ರಾವ್



ಕಾವಡಿ ಗ್ರಾಮದ ಹವರಾಲಿನ ನಿವಾಸಿ , ಕೃಷಿಕ ಶ್ರೀ ಬಿ.ಗೋವಿಂದ ರಾವ್ (61 ವರ್ಷ), ದಿ| ಶ್ರೀನಿವಾಸರಾವ್‌ರವರ ಪುತ್ರ ಇವರು ದಿನಾಂಕ 24-09-2015ರಂದು ಹೃದಯಾಘಾತದಿಂದ ನಿಧನರಾಗಿರುತ್ತಾರೆ. ಇವರು ಓದುವ ಹವ್ಯಾಸವನ್ನು ರೂಢಿಸಿಕೊಂಡಿದ್ದು, ಉತ್ತಮ ವಾಗ್ಮಿಗಳಾಗಿದ್ದರು. ಪರಿಸರದ ಅನೇಕ ಸಾಮಾಜಿಕ-ಶೈಕ್ಷಣಿಕ-ಧಾರ್ಮಿಕ ಸಂಘ ಸಂಸ್ಥೆಗಳಲ್ಲಿ ಭಾಷಣಕಾರರಾಗಿ, ದಾನಿಗಳಾಗಿ ಗುರುತಿಸಿಕೊಂಡಿರುತ್ತಾರೆ. ಇವರು ಇಬ್ಬರು ಪುತ್ರರು, ಪತ್ನಿ ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ.

### ಪದ್ಮಾವತಿ ಅಮ್ಮ

ಉಚ್ಚಿಲದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬಳಿಯ ದಿ| ಕೃಷ್ಣರಾವ್ ಶ್ಯಾನುಭಾಗ್‌ರವರ ಧರ್ಮಪತ್ನಿ ಶ್ರೀಮತಿ ಪದ್ಮಾವತಿ ಅಮ್ಮ ಇವರು ದಿನಾಂಕ 08-09-2015ನೇ ಮಂಗಳವಾರ ಉಚ್ಚಿಲದ ಸ್ವಗೃಹದಲ್ಲಿ ದೈವಾಧೀನರಾಗಿರುತ್ತಾರೆ.

### ಲೀಲಾ ಎಸ್.ರಾವ್

ಮೈಕೋಡಿ ಮುದರಂಗಡಿ ನಿವಾಸಿ ಶ್ರೀ ಶ್ರೀನಿವಾಸರಾಯರ ಧರ್ಮಪತ್ನಿ ಶ್ರೀಮತಿ ಲೀಲಾ ಎಸ್.ರಾವ್‌ರವರು ತಾ.14-09-2015ನೇ ಸೋಮವಾರದಂದು ದೈವಾಧೀನರಾಗಿರುತ್ತಾರೆ.

### ರಮಾ ಆರ್.ದೇವಿ

ಉಡುಪಿ ಕಲ್ಯಾಣನಗರ, ಕುಕ್ಕಿಕಟ್ಟೆ ಇಲ್ಲಿಯ ನಿವಾಸಿ ದಿ| ಕುಂಜಾರು ರಾಮರಾಯರ ಧರ್ಮಪತ್ನಿ ಶ್ರೀಮತಿ ರಮಾ ಆರ್.ದೇವಿ ಇವರು ತಾ.21-09-2015ನೇ ಸೋಮವಾರದಂದು ದೈವಾಧೀನರಾಗಿರುತ್ತಾರೆ. ಇವರು ಮಕ್ಕಳಾದ ಗಣೇಶ್ ಕೆ.ಆರ್., ಕುಮಾರಸ್ವಾಮಿ, ಸುಮಂಗಲಾ ಕಲಾಸಾಗರ್, ಸುಕನ್ಯಾರಮೇಶ್, ಮೊಮ್ಮಕ್ಕಳು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿರುತ್ತಾರೆ.

### ಕೆ. ಲಕ್ಷ್ಮೀನಾರಾಯಣ ರಾವ್

ಉಡುಪಿ ಅಂಬಾಗಿಲಿನ ನಿವಾಸಿ ಕೆ. ಲಕ್ಷ್ಮೀನಾರಾಯಣ ರಾವ್‌ರವರು ತಾ.15-09-2015ನೇ ಮಂಗಳವಾರ ದೈವಾಧೀನರಾಗಿರುತ್ತಾರೆ. ಇವರು ಪುತ್ರಿ, ಅಳಿಯ ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿರುತ್ತಾರೆ.

## ತುಲಾ ಮಾಸದ ವಿಶೇಷ ದಿನಗಳು

| | |
|---|---|
| 13-10-2015 | ನವರಾತ್ರಿ ಆರಂಭ |
| 17-10-2015 | ತುಲಾ ಸಂಕ್ರಮಣ |
| 18-10-2015 | ಲಲಿತಾ ಪಂಚಮಿ |
| 19-10-2015 | ಮೂಲನಕ್ಷತ್ರ (ಶಾರದಾ ಪೂಜೆ) |
| 21-10-2015 | ದುರ್ಗಾಷ್ಟಮಿ |
| 22-10-2015 | ಮಹಾನವಮಿ ವಿಜಯದಶಮಿ ಶಮಿ ಪೂಜೆ ನವರಾತ್ರಿ ಸಮಾಪ್ತಿ |
| 24-10-2015 | ಭಾಷ್ಯೈಕಾದಶಿ, ಸ್ವಾತಿ ಮಹಾನಕ್ಷತ್ರಾರಂಭ |
| 25-10-2015 | ಪ್ರದೋಷ |
| 27-10-2015 | ಪೂರ್ಣಿಮಾ |
| 30-10-2015 | ಸಂಕಷ್ಟಹರ ಚೌತಿ |
| 06-11-2015 | ವಿಶಾಖಾ ಮಹಾನಕ್ಷತ್ರ |
| 07-11-2015 | ಸರ್ವೈಕಾದಶಿ |
| 08-11-2015 | ಸೋಮ ಪ್ರದೋಷ |
| 09-11-2015 | ಜಲಪೂರಣ |
| 10-11-2015 | ಚತುರ್ದಶಿ ಸ್ನಾನ |
| 11-11-2015 | ಅಮಾವಾಸ್ಯೆ (ಲಕ್ಷ್ಮೀಪೂಜೆ) |
| 12-11-2015 | ದೀಪಾವಳಿ, ಗೋಪೂಜೆ |
| 16-11-2015 | ವೃಶ್ಚಿಕ ಸಂಕ್ರಮಣ |

### ಆಸರೆ

ಸೂರು ನಿರ್ಮಿಸಿ ಕೊಡುವ
ಭರವಸೆಯಿಂದ
ಹಾಕುವರು ಬಡಜನರು
ಚುನಾವಣಾ ಸಮಯದಲ್ಲಿ
ರಾಜಕಾರಣಿಗಳ ಫ್ಲೆಕ್ಸನ್ನು।
ಕಾದು ಕಾದು ಸೋತು
ಕೊನೆಗೆ ತಾವೇ ನಿರ್ಮಿಸಿದರು।
ಜೋಪಡಿಯೊಂದನ್ನು
ಉಪಯೋಗಿಸಿ
ರಾಜಕಾರಣಿಗಳಿಗೆ ಹಾಕಿದ
ಫ್ಲೆಕ್ಸನ್ನು॥

### ಶತ್ರು-ಮಿತ್ರ

ಮಿತ್ರರಿರಬೇಕು
ಗುರಿ ಸಾಧಿಸಲು
ಶತ್ರುಗಳಿರಬೇಕು
ಛಲದಿಂದ
ಮುನ್ನುಗ್ಗಲು॥

-ಶ್ರೀ ಮಹೇಶ್, ನಿಟಿಲಾಪುರ
ಪ್ರಾಂಶುಪಾಲರು, ಸರಸ್ವತಿ ಪ.ಪೂ.ಕಾಲೇಜು, ಕಡಬ

## ಶ್ರೀಶಾರದಾ ತುರ್ತು ಸೇವಾ ಸಮಿತಿ

**ಉಡುಪಿಯ ಸಮಾಜ ಬಾಂಧವರಿಗೆ ಯಾವುದೇ ರೀತಿಯ ತುರ್ತು ಸಹಾಯ ಅಗತ್ಯ ಬಿದ್ದಲ್ಲಿ ತುರ್ತು ಸೇವಾ ಸಮಿತಿಯನ್ನು ರಚಿಸಿಲಾಗಿದೆ. ಸಮಿತಿಯ ಸದಸ್ಯರ ದೂರವಾಣಿ ಸಂಖ್ಯೆ ಈ ಕೆಳಗೆ ಕೊಡಲಾಗಿದೆ ಅಗತ್ಯವಿದ್ದಾಗ ಸಮಾಜ ಬಾಂಧವರು ಇದರ ಸದುಪಯೋಗ ಮಾಡಿಕೊಳ್ಳಬಹುದು.**

| | | | |
|---|---|---|---|
| 1. | ಕರಂಬಳ್ಳಿ ವಸಂತ ರಾವ್ | - | 9632291183 |
| 2. | ಉಂಡಾರು ಕೃಷ್ಣಾನಂದ ರಾವ್ | - | 9164581333 |
| 3. | ನಂದಳಿಕೆ ಪ್ರವೀಣ ಕುಮಾರ್ ರಾವ್ | - | 9343572490 |
| 4. | ನಂದಳಿಕೆ ಉಮೇಶ್ ರಾವ್ | - | 8970504176 |
| 5. | ಹೆರ್ಗ ನಿರಂಜನ ರಾವ್ | - | 9902196175 |
| 6. | ಕೆರೆಬೆಟ್ಟು ಲಕ್ಷ್ಮೀನಾರಾಣ ಹೆಬ್ಬಾರ | - | 9448252736 |
| 7. | ಮಹೇಶ್ | - | 7259914498 |
| 8. | ಟಿ.ಜಗದೀಶ ರಾವ್ | - | 9686123905 |
| 9. | ಪುತ್ತಿಗೆ ಸುಬ್ರಹ್ಮಣ್ಯ ರಾವ್ | - | 9945379479 |
| 10. | ಅಜಿತ್ ರಾವ್ ಬೈಲೂರು | - | 9448108920 |
| 11. | ಆದ್ಯಪಾಡಿ ಮೋಹನದೇವ್ | - | 0820-2535328 |
| 12. | ವೈ. ಭುವನೇಂದ್ರ ರಾವ್ | - | 9448428330 |
| 13. | ಡಾ| ವೈ. ಸುದರ್ಶನ್ ರಾವ್ | - | 9845136322 |
| 14. | ಕುತ್ಪಾಡಿ ಸುರೇಶ್ ರಾವ್ | - | 9483242111 |
| 15. | ವೈ. ಪ್ರಕಾಶ್ ಕುಮಾರ್ | - | 9448445617 |
| 16. | ವೈ. ಪ್ರಸಾದ್ ಕುಮಾರ್ | - | 9036252105 |
| 17. | ಪರೀಕ ಚಂದ್ರಶೇಖರ ರಾವ್ | - | 9591893091 |
| 18. | ಬಿ. ಜಯರಾಮ ರಾವ್ | - | 9844545040 |
| 19. | ಎಮ್.ಪಾಲಚಂದ್ರ ರಾವ್ | - | 0820-2521366 |
| 20. | ಕೆ. ವೆಂಕಟ್ ರಾವ್ | - | 9480016125 |
| 21. | ಎಸ್.ಎಮ್.ರಾವ್ | - | 9449914040 |
| 22. | ಐ.ಕೆ.ಜಯಚಂದ್ರ ರಾವ್ | - | 9448331683 |

### ಕು| ಮೈತ್ರಿ.ಎ.



2014-2015 ಕೇರಳ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ $A^+$ Gradeಗಳಿಸಿ ತೇರ್ಗಡೆಯಾಗಿರುತ್ತಾಳೆ. ಸ್ಕೌಟ್ ಮತ್ತು ಗೈಡ್ - ರಾಜ್ಯ ಗೈಡ್ ಪುರಸ್ಕಾರ ಹಾಗೂ ರಾಷ್ಟ್ರಪತಿ ಗೈಡ್ ಪದಕ ಪಡೆದಿದ್ದಾಳೆ. ಈಕೆ ಶ್ರೀಮತಿ ಶ್ಯಾಮಲ ಮತ್ತು ಏರಿಕ್ಕಳ ವಿಷ್ಣು ಇವರ ಮಗಳು ಹಾಗೂ ಶ್ರೀಮತಿ ಸರಸ್ವತಿ ಮತ್ತು ಶ್ರೀ ಏರಿಕ್ಕಳ ಕೃಷ್ಣಯ್ಯನವರ ಮೊಮ್ಮಗಳು

### ಕು| ಸೌಮ್ಯಶ್ರೀ ರಾವ್



2014-2015ನೇ ಸಾಲಿನ ಪಿಯುಸಿ ಪರೀಕ್ಷೆಯಲ್ಲಿ ಶೇ.89 ಗಳಿಸಿ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರವೇಶ ಗಳಿಸಿರುತ್ತಾಳೆ. ಇವಳು ಕುಂದಾಪುರ ತಾಲೂಕಿನ ಸಿದ್ದಾಪುರ ಗ್ರಾಮದ ನಂದಳಿಕೆ ಶಿವಾನಂದ ರಾವ್ ಹಾಗೂ ಶ್ರೀಮತಿ ನಳಿನಾಕ್ಷಿಯವರ ಪುತ್ರಿಯಾಗಿರುತ್ತಾಳೆ.

### ಶುಭ ವಿವಾಹ

ಶ್ರೀಮತಿ ಅನ್ನಪೂರ್ಣೇಶ್ವರೀ ಮತ್ತು ಶ್ರೀ ಅಶೋಕ್ ಎಸ್.ಹೆಬ್ಬಾರ್ ಹೆಮ್ಮಾಡಿ ಇವರ ಪುತ್ರಿ **ಶಿಲ್ಪ** ಹಾಗೂ ಶ್ರೀಮತಿ ಎಸ್.ಪದ್ಮ ಮತ್ತು ಶ್ರೀ ಜಿ.ಆರ್.ರವೀಶ್ ಹಾಸನ ಇವರ ಪುತ್ರ **ಆರ್.ಪ್ರಮೋದ್** ಇವರ ವಿವಾಹವು ತಾ.23-09-2015ರಂದು ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು ಇಲ್ಲಿ ನೆರವೇರಿತು.

### ಶುಭ ಜನನ

ಕೆಮ್ಮಣ್ಣು ಪಡುಮನೆ ಶ್ರೀ ಅನಿಲ ಕುಮಾರ್ ಮತ್ತು ಪದ್ಮಿನಿ ಕುಮಾರ್‌ರವರ ಪುತ್ರ ದೀಪಕ್ ಕುಮಾರ್ ಮತ್ತು ಶ್ರೀಮತಿ ಪ್ರೀತಿ ಡಿ.ಕುಮಾರ್ (ಶ್ರೀ ಕುಂಜಿಬೆಟ್ಟು ಮುರಲೀಧರ ರಾವ್ ಮತ್ತು ಜಯಲಕ್ಷ್ಮೀರವರ ಪುತ್ರಿ) ದಂಪತಿಗಳಿಗೆ ತಾ.31-07-2015ರಂದು ಗಂಡು ಮಗುವಿನ ಜನನ.

### ಗೃಹ ಪ್ರವೇಶ

ಕೊಕ್ರಾಡಿ ಕೆಳಗಿನ ಮನೆ ಶ್ರೀ ಚಂದ್ರಶೇಖರ ರಾವ್ ಮತ್ತು ಶ್ರೀಮತಿ ಇಂದ್ರಾಣಿಯವರ ಪುತ್ರ ಶ್ರೀ ಮಹೇಶಕುಮಾರ್ ಮತ್ತು ಶ್ರೀಮತಿ ಪಲ್ಲವಿ ಇವರು ಉಡುಪಿಯ ಅಂಬಲಪಾಡಿ ಜಂಕ್ಷನ್ ಕಪ್ಪೆಟ್ಟು ಗರೋಡಿ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ ಗೃಹ **"ಶ್ರೀ ಸ್ಕಂದ ನಿಲಯ"**ದ ಪ್ರವೇಶೋತ್ಸವವನ್ನು ದಿನಾಂಕ 11-06-2015ರಂದು ಬಂಧು-ಬಾಂಧವ, ಮಿತ್ರರನ್ನು ಆಹ್ವಾನಿಸಿ ನೆರವೇರಿಸಿದರು.

### ಭೀಮರಥ ಶಾಂತಿ ಆಚರಣೆ

ಕೊಕ್ರಾಡಿ ಕೆಳಗಿನ ಮನೆ ಚಂದ್ರಶೇಖರ್‌ರಾವ್ ಅವರ ಭೀಮರಥ ಶಾಂತಿಯನ್ನು ತನ್ನ ಪತ್ನಿ ಶ್ರೀಮತಿ ಇಂದ್ರಾಣಿಯವರೊಡನೆ ದಿನಾಂಕ 25-06-2015ರಂದು ಅವರ ಸ್ವಗೃಹದಲ್ಲಿ, ಪುತ್ರರು, ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಮತ್ತು ಬಂಧು-ಬಾಂಧವರ ಸಮ್ಮುಖದಲ್ಲಿ ನೆರವೇರಿಸಿದರು.





RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS



ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

॥ ಶ್ರೀ ಮಹಾವಿಷ್ಣು ಪ್ರಸನ್ನಃ ॥

## ವಿಷ್ಣುಮಂಗಲ ಶ್ರೀ ಮಹಾವಿಷ್ಣು ದೇವಸ್ಥಾನ

ಅಂಚೆ : ರಾಮದಾಸನಗರ, ಕೂಡ್ಲು, ಕಾಸರಗೋಡು - 671123, ಕೇರಳ ಪ್ರಾಂತ್ಯ

ದೂರವಾಣಿ : 04994-226867, 09495417793, 09446772355, 08547933400

### ಮನವಿ ಪತ್ರ

ಭಗವದ್ಭಕ್ತರೇ,

ವಿಷ್ಣುಮಂಗಲ ಶ್ರೀ ಮಹಾವಿಷ್ಣು ದೇವಸ್ಥಾನವು ಕಾಸರಗೋಡು ಜಿಲ್ಲೆಯ ಅತಿ ಪುರಾತನ ಹಾಗೂ ಪ್ರಸಿದ್ಧ ದೇವಸ್ಥಾನವಾಗಿದ್ದು ಕಾಸರಗೋಡು ನಗರದಿಂದ 5 ಕಿ.ಮೀ ದೂರದಲ್ಲಿ ಕೂಡ್ಲು ಗ್ರಾಮದಲ್ಲಿದೆ. ಮಹಾವಿಷ್ಣುವಿನ ಚತುರ್ಬಾಹು ವಿಗ್ರಹ ಕೃಷ್ಣಶಿಲೆಯದ್ದಾಗಿದೆ. ದೇವಸ್ಥಾನದ ಪುಷ್ಕರಿಣಿ ಚಕ್ರತೀರ್ಥ ಎಂಬ ಹೆಸರಿನಿಂದ ಪ್ರಖ್ಯಾತಿ ಹೊಂದಿದ್ದು ಇದರ ನೀರು ಔಷಧೀಯ ಗುಣಗಳಿಂದ ಕೂಡಿದೆ.

ಕೇರಳದಲ್ಲಿ ಭೂಮಸೂದೆ ಜಾರಿ ಆದ ಮೇಲೆ ದೇವಸ್ಥಾನಗಳ ಆಸ್ತಿ ಸಂಪೂರ್ಣ ಕೈ ಬಿಟ್ಟು ಹೋಗಿ ದೇವಸ್ಥಾನಗಳು ಆರ್ಥಿಕವಾಗಿ ತುಂಬಾ ಬಡವಾಯಿತು. ಇದಕ್ಕೆ ವಿಷ್ಣುಮಂಗಲವೂ ಹೊರತಾಗಿಲ್ಲ. ಪ್ರಸ್ತುತ ಭಕ್ತರೇ ದೇವರ ಆಸ್ತಿಯಾಗಿದ್ದಾರೆ. ಕ್ರಿ.ಶ.2005ರಲ್ಲಿ ಈ ದೇವಸ್ಥಾನವನ್ನು ನವೀಕರಿಸಿ ಕುಂಬಾಭಿಷೇಕ ನಡೆಸಲಾಗಿದೆ.

ಪ್ರಸ್ತುತ ದೇವಸ್ಥಾನದ ವಾರ್ಷಿಕ ಉತ್ಸವದ ಸಂದರ್ಭದಲ್ಲಿ ಪೂಜಾ ಸಾಮಾಗ್ರಿಗಳನ್ನೂ ಅನ್ನದಾನಕ್ಕೆ ಬೇಕಾದ ಪಾತ್ರೆ ಸಾಮಾಗ್ರಿಗಳನ್ನೂ ಪಕ್ಕದ ದೇವಸ್ಥಾನದಿಂದ ಎರವಲು ಪಡೆಯಲಾಗುತ್ತಿದೆ. ಇದೀಗ ಈ ದೇವಸ್ಥಾನ ಮತ್ತೆ ಜೀರ್ಣಾವಸ್ಥೆಗೆ ತಲುಪಿದ್ದು, ಇದನ್ನು ಸಂಪೂರ್ಣ ದುರಸ್ಥಿಗೊಳಿಸಿ ಇಲ್ಲಿಗಾಗಮಿಸುವ ಭಕ್ತರ ಸೌಕರ್ಯಕ್ಕಾಗಿ ಕೆಲವೊಂದು ಕಾಮಗಾರಿಗಳನ್ನೂ ನಡೆಸಲು ಉದ್ದೇಶಿಸಲಾಗಿದೆ. ಈ ಎಲ್ಲಾ ಪುಣ್ಯಕಾರ್ಯಗಳಲ್ಲಿ ಭಕ್ತಾಧಿಗಳ ಸಹಕಾರವನ್ನು ನಿರೀಕ್ಷಿಸುತ್ತಿದ್ದೇವೆ ಮತ್ತು ಅದಕ್ಕಾಗಿ ಕೇರಳ ಗ್ರಾಮೀಣ ಬ್ಯಾಂಕ್‌ನಲ್ಲಿ ಒಂದು ಖಾತೆಯನ್ನು ತೆರೆಯಲಾಗಿದೆ. ವಿಷ್ಣುಮಂಗಲ ಶ್ರೀ ಮಹಾವಿಷ್ಣು ದೇವಸ್ಥಾನದ ಜೀರ್ಣೋದ್ಧಾರ ಫಂಡ್ IFSE Code KLGB0040471, ಖಾತೆ ಸಂಖ್ಯೆ : S.B. 40471101006384 ಕೇರಳ ಗ್ರಾಮೀಣ ಬ್ಯಾಂಕ್, ಕಾಸರಗೋಡು ಶಾಖೆ, ಅಂಚೆ ಕಾಸರಗೋಡು, 671121, ಕೇರಳ ಪ್ರಾಂತ್ಯ.

ಕಾಸರಗೋಡು **ಕೆ.ಜಿ. ಶ್ಯಾನುಭೋಗ್** ಅನುವಂಶಿಕ ಮೊಕ್ತಸರ

01-06-2015. ವಿಷ್ಣುಮಂಗಲ ಶ್ರೀ ಮಹಾವಿಷ್ಣು ದೇವಸ್ಥಾನ

ಅಂಚೆ ರಾಮದಾಸನಗರ, ಕಾಸರಗೋಡು -271123, ಕೇರಳ

**ಯಾವುದೇ ಕಾಮಗಾರಿಯನ್ನು ಪ್ರಾಯೋಜಿಸುವವರ ಅಥವಾ ಅವರು ಸೂಚಿಸುವ ವ್ಯಕ್ತಿಗಳ ಹೆಸರಿನಲ್ಲಿ ಶಾಶ್ವತವಾಗಿ ನಾಮ ಫಲಕದಲ್ಲಿ ಅಳವಡಿಸಲಾಗುವುದು.**

## ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ

**ಅಂಚೆ : ಕೋಡಿಂಬಾಡಿ-574287, ಪುತ್ತೂರು ತಾಲೂಕು, ದ.ಕ. ಫೋನ್ : 261010, 9901247080 (ಮೊ)**

### ವಿಜ್ಞಾಪನೆ

ಪ್ರಿಯರೇ,

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಯಂಗಳವರ ಹಾಗೂ ತತ್‌ಕರಕಮಲ ಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದಿಂದ,

ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯವು ಕೊನೆಯ ಹಂತಕ್ಕೆ ತಲುಪಿದ್ದು ಮುಂದಿನ ವರ್ಷ ಜನವರಿ (2016)ರಲ್ಲಿ ''ಬ್ರಹ್ಮಕಲಶೋತ್ಸವ' ನಡೆಸುವ ಬಗ್ಗೆ ದಿನಾಂಕ 20-09-2015ನೇ ಭಾನುವಾರ ಬೆಳಿಗ್ಗೆ ಮಠಂತಬೆಟ್ಟು ಶ್ರೀ ಮಹಿಷಮರ್ದಿನಿ ದೇವಸ್ಥಾನದ ವಠಾರದಲ್ಲಿ ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ವೇದಮೂರ್ತಿ ವಾಗೀಶ ಶಾಸ್ತ್ರಿಗಳ ದಿವ್ಯ ಉಪಸ್ಥಿತಿಯಲ್ಲಿ ಭಕ್ತಾಧಿಗಳ ''ಸಮಾಲೋಚನೆ ಸಭೆಯು ನಡೆದಿರುತ್ತದೆ. ಈ ಸಭೆಯಲ್ಲಿ ಸಮಾಜಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಾಗಿದ್ದು ತಮ್ಮ ಸಲಹೆ, ಸೂಚನೆಗಳನ್ನು ನೀಡಿರುತ್ತಾರೆ ಹಾಗೂ ಬ್ರಹ್ಮಕಲಶೋತ್ಸವವನ್ನು ಯಶಸ್ವಿಗೊಳಿಸಲು ಕಂಕಣಬದ್ಧರಾಗಿರುತ್ತಾರೆ. ಸಮಾಜ ಬಾಂಧವರು ಶ್ರೀದೇವಳದ ಜೀರ್ಣೋದ್ಧಾರ ಕೆಲಸಕ್ಕೆ ಉದಾರ ದೇಣಿಗೆಯನ್ನು ನೀಡಬೇಕಾಗಿ ವಿನಂತಿ. ದೇಣಿಗೆ ನೀಡುವವರು ಕರ್ನಾಟಕ ಬ್ಯಾಂಕ್, ಪುತ್ತೂರು ಶಾಖೆ ನಂಬ್ರ S.B.A/c 6042500103445201 ಇದಕ್ಕೆ ಕಳುಹಿಸಬೇಕಾಗಿ ವಿನಂತಿ

**ಆಡಳಿತ ಮಂಡಳಿ ಅಧ್ಯಕ್ಷರು** **ಅಧ್ಯಕ್ಷರು, ಜೀರ್ಣೋದ್ಧಾರ ಸಮಿತಿ**

## ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.

ಹಾಗೂ ತತ್ಸಂಬಂಧಿತ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

| | |
|---|---|
| #1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010 | ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ |

**ಮೊಬೈಲ್- 9886629697, 9986119865**

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | | |
|---|---|---|
| ಮಂಗಳಾರತಿ | : | ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ | : | **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ | : | **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ | : | **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ | : | ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.30-10-2015) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

ತಾ.19-10-2015 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

ತಾ.18-10-2015, ತಾ.31-10-2015 ಹಾಗೂ ತಾ.16-11-2015 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಉಡುಪಿ ಕುಕ್ಕಿಕಟ್ಟೆಯ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಯ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)** ವತಿಯಿಂದ 2015-16ನೇ ಸಾಲಿನ **ದಿ| ಡಾ.ವೈ.ಚಂದ್ರಶೇಖರರಾವ್ ಸ್ಮಾರಕ** ವಿದ್ಯಾರ್ಥಿವೇತನಕ್ಕಾಗಿ ಪ್ರತಿಭಾನ್ವಿತ ಹಾಗೂ ಆರ್ಥಿಕ ಸಹಾಯ ಅಗತ್ಯವಿರುವ ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗಾಗಿ **ದಿ| ಸಾತ್ವಿಕ್ ಶಾಸ್ತ್ರಿ ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿಯೂ ಅರ್ಜಿ** ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಕೈಬರಹದ ಅರ್ಜಿಯಲ್ಲಿ ತಮ್ಮ ವಿವರಗಳೊಂದಿಗೆ ಆದಾಯ ಹಾಗೂ ವ್ಯಾಸಂಗ ದೃಢಪತ್ರಿಕೆಗಳನ್ನು ಲಗತ್ತಿಸಿರಬೇಕು. ತಂದೆ-ತಾಯಿಯರ ವೃತ್ತಿ, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು (ಪಾಸ್ ಬುಕ್ಕಿನ ಮೊದಲ ಹಾಳೆಯ ಪ್ರತಿ) ಅರ್ಜಿಯಲ್ಲಿ ನಮೂದಿಸಿರಬೇಕು. ಕ್ರಮಬದ್ಧವಾಗಿ ಬರೆದ ಅರ್ಜಿಗಳನ್ನು ಮಾತ್ರ ಗಮನಿಸಲಾಗುವುದು. ಅರ್ಜಿ ಕಳುಹಿಸಲು ಕೊನೆಯ ದಿನಾಂಕ 31-10-2015. ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**ಡಾ| ವೈ.ಸುದರ್ಶನರಾವ್,**

**ಕೆನರಾಹೆಲ್ತ್‌ಸೆಂಟರ್, ಅಂಜುಮಾನ್ ರಸ್ತೆ, ಸಿಟಿಬಸ್ಟ್ಯಾಂಡ್ ಬಳಿ, ಉಡುಪಿ-576101**

## ಶ್ರೀಶಾರದಾ ವೇದಿಕೆ - ಪ್ರಕಟಣೆ

**ಪತ್ರಿಕೆಯ ವಿಳಾಸ : ಸಂಪಾದಕರು, ಶ್ರೀ ಶಾರದ ಪತ್ರಿಕೆ, ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102.**

**ಇ-ಮೇಯ್ಲ್ : srisharadaudupi@gmail.com ಹಾಗೂ sudarshany@rediffmail.com**

**ವೆಬ್‌ಸೈಟ್ : www.srisharada.org ವಾಟ್ಸ್ ಆ್ಯಪ್ ನಂಬ್ರ : 9845136322**

**ಶಾರದ ಮಂಟಪದ ಮ್ಯಾನೇಜರ್ : 0820-2520754, 9448108920**

### ಶ್ರೀಶಾರದಾ ವೇದಿಕೆಗೆ ಸದಸ್ಯತನ ಶುಲ್ಕ

| | | |
|---|---|---|
| ಆಜೀವಸದಸ್ಯರು | : | ರೂ.500/- |
| ದಾನಿಗಳು | : | ರೂ.1000/- |
| ಪೋಷಕರು | : | ರೂ.5000/- |
| ಮಹಾಪೋಷಕರು | : | ರೂ.10000/- |

### ಜಾಹೀರಾತುದರ

| | | |
|---|---|---|
| ಕಲರ್ ಪುಟದ 1/3ನೇ ಭಾಗ 12 ತಿಂಗಳುಗಳಿಗೆ | : | ರೂ.12000/- |
| ಕಲರ್ ಪುಟದ 1/6ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದುಬಾರಿಗೆ | : | ರೂ.500/- |
| ಕಪ್ಪು ಬಿಳುಪು ಪುಟದ 1/6ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದು ಬಾರಿಗೆ | : | ರೂ.300/- |
| ಕಪ್ಪು ಬಿಳುಪು ಪುಟದ 2 ಇಂಚು 2 ಕಾಲಂ 12 ತಿಂಗಳುಗಳಿಗೆ | : | ರೂ.1200/- |

ಈ ಶುಲ್ಕವನ್ನು ತಮ್ಮ ಹೆಸರು ವಿಳಾಸದೊಂದಿಗೆ, ನಗದು, ಚೆಕ್ ಅಥವಾ ಡಿ.ಡಿ. ಮುಖಾಂತರ ಸಲ್ಲಿಸಬಹುದು ಅಥವಾ ಸಿಂಡಿಕೇಟ್ ಬ್ಯಾಂಕ್, ಕಾರ್‌ಸ್ಟ್ರೀಟ್ ಬ್ರಾಂಚ್, ಬ್ಯಾಂಕಿನ ಖಾತೆಗೆ ನೇರವಾಗಿ ಜಮಾ ಮಾಡಿ ಅದರ ರಶೀದಿಯನ್ನು ಮೇಲಿನ ನಮ್ಮ ಇ-ಮೇಯ್ಲ್/ವಾಟ್ಸ್‌ಆ್ಯಪ್ ವಿಳಾಸಕ್ಕೆ ಕಳುಹಿಸಬಹುದು. ಖಾತೆಯ ಹೆಸರು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ, ಖಾತೆಸಂಖ್ಯೆ : 01092200002928 at Syndicate Bank Carstreet Branch, Udupi IFSC Code SYNB0000186

**ಸಮಾಜ ಬಾಂಧವರು ಪತ್ರಿಕೆಯನ್ನು ತುಂಬು ಹೃದಯದಿಂದ ಪ್ರೋತ್ಸಾಹಿಸುವಂತೆ ವಿನಂತಿ**

## ಮಹಾಪೋಷಕರಾಗಿ ಡಾ। ಸತ್ಯನಾರಾಯಣ



ಶೃಂಗೇರಿ ಅಡ್ಡಗದ್ದೆಯಲ್ಲಿರುವ ಡಿವೈನ್ ಹೀಲಿಂಗ್ ಸೆಂಟರ್‌ನ ವೈದ್ಯಾಧಿಕಾರಿಗಳಾದ, ಪ್ರಸಿದ್ಧ ರೇಖಿ ಚಿಕಿತ್ಸಾತಜ್ಞ ಡಾ। ಸತ್ಯನಾರಾಯಣ ಇವರು ಶಾರದಾ ವೇದಿಕೆಯ ಮಹಾಪೋಷಕರಾಗಿ ವೇದಿಕೆಯ ಚಟುವಟಿಕೆಗಳನ್ನು ಪ್ರೋತ್ಸಾಹಿಸಿದ್ದಾರೆ. ಇವರು ಮೂಲತಃ ಕುಂದಾಪುರ ಗ್ರಾಮದ ಉಳ್ತೂರು ಗ್ರಾಮದ ಶ್ರೀ ತಮ್ಮಯ್ಯ ಪಾಟಾಳಿ ಹಾಗೂ ಶ್ರೀಮತಿ ಯಶೋದಮ್ಮನವರ ಪುತ್ರ. ಇವರು ಬಳ್ಳಾರಿಯ ತಾರಾನಾಥ ಸರಕಾರಿ ಆಯುರ್ವೇದ ಮಹಾವಿದ್ಯಾಲಯದಿಂದ ಪ್ರಥಮ ರ್‍ಯಾಂಕ್ ಹಾಗೂ ಚಿನ್ನದ ಪದಕದೊಂದಿಗೆ ಬಿ.ಎ.ಎಂ.ಎಸ್ ಪದವಿ ಪಡೆದ ಪ್ರತಿಭಾವಂತರು. ರೇಖಿ ಚಿಕಿತ್ಸೆಯನ್ನು ಸ್ವಯಂಸ್ಫೂರ್ತಿಯಿಂದ ಕಲಿತು ಅದರಲ್ಲಿ ಗ್ರ್ಯಾಂಡ್ ಮಾಸ್ಟರ್ ಪದವಿ ಪಡೆದಿದ್ದಾರೆ. ರಾಜ್ಯಾದ್ಯಂತ ವಿವಿಧ ಸಂಘ ಸಂಸ್ಥೆಗಳು ಇವರಿಂದ ರೇಖಿ ಚಿಕಿತ್ಸಾಶಿಬಿರವನ್ನು ಏರ್ಪಡಿಸುತ್ತಿವೆ. ಇವರು ಒಂದೂವರೆ ಲಕ್ಷಕ್ಕೂ ಹೆಚ್ಚು ರೇಖಿ ಚಿಕಿತ್ಸಕರನ್ನೂ ನಾಲ್ಕುನೂರ ಎಂಬತ್ತರಷ್ಟು ರೇಖಿ ಮಾಸ್ಟರ್‌ಗಳನ್ನೂ ಎಪ್ಪತ್ತೈದರಷ್ಟು ಗ್ರ್ಯಾಂಡ್ ಮಾಸ್ಟರ್‌ಗಳನ್ನೂ ತರಬೇತುಗೊಳಿಸಿದ್ದಾರೆ. ಪ್ರಕೃತಿಯ ಮಡಿಲಲ್ಲಿರುವ ಶೃಂಗೇರಿಯ ಅಡ್ಡಗದ್ದೆಯ ಐದು ಎಕರೆ ವಿಸ್ತೀರ್ಣದ ಡಿವೈನ್ ಹೀಲಿಂಗ್ ಸೆಂಟರ್‌ನಲ್ಲಿ ಇವರ ನಿವಾಸ, ಧ್ಯಾನಮಂದಿರ ಹಾಗೂ ಚಿಕಿತ್ಸಾ ಕೇಂದ್ರವಿದೆ. ರೇಖಿ ಚಿಕಿತ್ಸೆಯ ವಿಷಯದಲ್ಲಿ ‘ರೇಖಿ ಹಾಗೂ ಆಧ್ಯಾತ್ಮಿಕ ಚಿಕಿತ್ಸೆ’ ಹಾಗೂ ‘ಬಹೂಪಯೋಗಿ ರೇಖಿ ಚಿಕಿತ್ಸೆ’ ಎಂಬ ಪುಸ್ತಕಗಳನ್ನು ಬರೆದಿದ್ದಾರೆ. ತಮ್ಮ ಪ್ರಕಾಶನದಲ್ಲಿ ಅವರ ತಂದೆಯವರು ಬರೆದಿದ್ದ ಕವನಗಳನ್ನು ‘ಎಸಳು’ ಎಂಬ ಕವನ ಸಂಕಲನದ ರೂಪದಲ್ಲಿ ಪ್ರಕಟಿಸಿದ್ದಾರೆ. ಹಾಗೆಯೇ ಶ್ರೀಮತಿ ಸುಮಿತ್ರಮ್ಮನವರ ಮನೆಮದ್ದುಗಳ ಸಂಗ್ರಹವನ್ನು ‘ಅಂಗಳದಲ್ಲಿ ಔಷಧಿ’ ಎಂಬ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ಬಾಲ್ಯದಲ್ಲಿ ತಮ್ಮ ವಿದ್ಯಾಭ್ಯಾಸಕ್ಕೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಕುಂಜಿಬೆಟ್ಟು ಉಡುಪಿಯಿಂದ ವಿದ್ಯಾರ್ಥಿವೇತನ ಪಡೆದಿದ್ದನ್ನು ಅವರು ನೆನಪಿಸಿಕೊಳ್ಳುತ್ತಾರೆ. ಇವರ ಪತ್ನಿ ಶ್ರೀಮತಿ ಗಾಯತ್ರಿ ರೇಖಿ ಚಿಕಿತ್ಸೆಯಲ್ಲಿ ಗ್ರ್ಯಾಂಡ್ ಮಾಸ್ಟರ್ ಪದವಿ ಪಡೆದಿದ್ದು ಇವರ ಎಲ್ಲಾ ಕೆಲಸಗಳಲ್ಲಿ ಸಹಧರ್ಮಿಣಿಯಾಗಿದ್ದಾರೆ. ಪ್ರತಿಭಾವಂತ ಮಕ್ಕಳಾದ ನೇಹಾ ದ್ವಿತೀಯ ಪಿಯುಸಿಯಲ್ಲೂ, ಮಗ ವಿಕ್ರಮ ಎಸ್.ಎಸ್.ಎಲ್.ಸಿ.ಯಲ್ಲೂ ಕಲಿಯುತ್ತಿದ್ದಾರೆ. ಡಾ। ಸತ್ಯನಾರಾಯಣ ಅವರ ಕುಟುಂಬಕ್ಕೆ ಶ್ರೀ ಶಾರದೆಯು ಸಕಲೈಶ್ವರ್ಯಗಳನ್ನು ಕರುಣಿಸಿ ಪ್ರೋತ್ಸಾಹಿಸಲಿ ಎಂದು ಶಾರದಾ ಬಳಗವು ಹಾರೈಸಿ ಅಭಿನಂದನೆಗಳನ್ನು ಸಲ್ಲಿಸುತ್ತಿದೆ. ಇವರ ದೂರವಾಣಿ ಸಂಖ್ಯೆ 9481261110

## ಶ್ರೀ ಕೆ.ಎಸ್.ಮುರಳೀಧರ್ ರಾವ್‌ರವರಿಗೆ ಡಾಕ್ಟರೇಟ್ ಪದವಿ



ಮಂಗಳೂರಿನ ಎಸ್.ಡಿ.ಎಮ್. ಉದ್ಯಮಾಡಳಿತ (business management) ಕಾಲೇಜಿನಲ್ಲಿ ಉಪಪ್ರಾಂಶುಪಾಲರಾಗಿರುವ ಶ್ರೀ ಕೆ.ಎಸ್.ಮುರಳೀಧರ ರಾವ್‌ರವರು ಪ್ರೊ। ಡಾ। ವೈ.ಮುನಿರಾಜು ಇವರ ಮಾರ್ಗದರ್ಶನದಲ್ಲಿ ಬರೆದು ಮಂಡಿಸಿದ "An evaluation of Banc-assurance and Banc-marketing from an Indian perspective with special reference to costal karnataka" ಮಹಾಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾನಿಲಯವು Ph.D ಪದವಿ ನೀಡಿದೆ. ಇವರು ಕೊಯಿಕುಡೆ ಶ್ರೀಧರ ರಾವ್ ಹಾಗೂ ಶಾಂತ ದಂಪತಿಗಳ ಪುತ್ರ ಹಾಗೂ ಕುಕ್ಕಿಕಟ್ಟೆ ಡಾ। ವೈ. ಚಂದ್ರಶೇಖರ್ ರಾವ್ ಹಾಗೂ ಇಂದಿರಾ ದಂಪತಿಗಳ ಅಳಿಯ.

## ಹಾರ್ದಿಕ ಶುಭಾಶಯಗಳು



### ಶ್ರೀ ದೇವಾನಂದ ಭಟ್, ಬೆಳುವಾಯಿ

ಕಲಾವಿದ, ಸಂಘಟಕ, ಛಾಯಚಿತ್ರಗಾರ, ಸಾಧನೆಯಿಂದ ಯಶಸ್ಸಿನ
ಮೆಟ್ಟಲೇರಿದ ಅಪ್ರತಿಮ ಕಲಾ ಕಣ್ಮಣಿ, ಯಕ್ಷದೇವ ಮಿತ್ರಕಲಾ ಮಂಡಳಿಯ
ರೂವಾರಿ,ಅನೇಕ ಅಸಹಾಯಕರ ದಾತಾರ, ಹೊಸ ಹೊಸ ಕಲಾ ಚಿಂತನೆಯಹರಿಕಾರ,
ಯಕ್ಷಗಾನ ಕಲೆಯ ಹಿಮ್ಮೇಳ–ಮುಮ್ಮೇಳ ಕಲಾವಿದ, ರಾಜ್ಯವ್ಯಾಪಿ,
ದೇಶವ್ಯಾಪಿ ಸುತ್ತಿ ವಿದೇಶಗಳಿಗೂ ಕಲೆಯ ಕಂಪನ್ನು ಪಸರಿಸುವ ಮಾನನೀಯ
ಕಲಾಧರ, ಸದಾ ಮುಗುಳು ನಗೆಯ ಕಲಾಮಾತೆಯ ಸೇವಾ ಆರಾಧನೆಯಿಂದಲೇ
ಅನೇಕ ಸಾಧನೆ ಪ್ರಶಂಸೆ ಪ್ರಶಸ್ತಿಗಳನ್ನು, ಮಾನ ಸಂಮಾನಗಳನ್ನು ತನ್ನದಾಗಿಸಿಕೊಂಡ
ಕಲಾ ಸರ್ವತೋಮುಖ ಸೌಂದರ್ಯದ ಸಾಧಕ “ದೇವಾನಂದ್ ಭಟ್” ರವರು ಸತತ
ಎರಡನೇ ಬಾರಿ ಅಮೇರಿಕಾದಲ್ಲಿ ಯಕ್ಷಗಾನ ಚೆಂಡೆವಾದಕರಾಗಿ ತೆರಳಿದ್ದಾರೆ.
ಇವರ ಪ್ರಯಾಣ ಶುಭಪ್ರದ ಮತ್ತು ಸುಖಮಯವಾಗಲಿ......
ಇವರಿಗೆ ಶುಭಾಶಯ ಕೋರುವ ಅಭಿಮಾನಿ ಬಳಗ ಮೂಡಬಿದಿರೆ.

**ಯು. ಪ್ರಫುಲ್ಲಚಂದ್ರ ರಾವ್**
ಭಾರತ್ ಡೆವಲಪರ್ಸ್, ಉಡುಪಿ

**ಯು. ಅರವಿಂದ ಕುಮಾರ್**
ಮಣಿಪಾಲ

**ವಿಶ್ವನಾಥ ಶ್ಯಾನುಭಾಗ್**
ಹರಿಕೃಷ್ಣ ಡಿಜಿಟಲ್ಸ್, ಉಡುಪಿ

**ವೆಂಕಟರಮಣ ರಾವ್**
ಮೂಡುಬೆಳ್ಳೆ

## ಸೋಣದೊಂಜಿ ದಿನ - ಗೌರವಾರ್ಪಣೆ

■...6ನೇ ಪುಟದಿಂದ



ಸನ್ಮಾನಿತರಾದ ಶ್ರೀಯುತ ಜಗನ್ನಿವಾಸ ರಾವ್ ಇವರು ಸ್ಥಾನಿಕ ಬ್ರಾಹ್ಮಣ ಸಮಾಜದಲ್ಲಿ ಇಂದು ಬ್ರಾಹ್ಮಣ್ಯವು ಅಳಿಯುತ್ತಿದ್ದು, ಅದನ್ನು ಉಳಿಸಿ ಮುಂದಿನ ನಮ್ಮ ಪೀಳಿಗೆಗೆ ಧಾರ್ಮಿಕ ಸಂಸ್ಕೃತಿಯನ್ನು ರೂಢಿಸಿಕೊಳ್ಳುವಂತೆ ಮಾಡುವುದು ಮಹಿಳೆಯರ ಆದ್ಯ ಕರ್ತವ್ಯವಾಗಿದೆ ಎಂದು ಎಚ್ಚರಿಸಿದರು. ಅಲ್ಲದೆ ನನಗೆ ದೊರೆತ ಗೌರವದಿಂದ ನನ್ನ ಜವಾಬ್ದಾರಿಯು ಇನ್ನೂ ಹೆಚ್ಚಿದೆ ಎಂದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀ ಪಿ.ಡಿ.ಚಂದ್ರಶೇಖರ್ ರಾವ್ ಇವರು ಧನ್ಯವಾದ ಸಮರ್ಪಿಸಿದರು. ಶ್ರೀ ಅರವಿಂದ ರಾವ್ ಇವರು ಕಾರ್ಯಕ್ರಮ ನಿರೂಪಿಸಿದರು.

ವರದಿ : ಸೀತಾದೇವಿ **ಭಾಸ್ಕರ್‌ರಾವ್**, ನಿರ್ದೇಶಕರು, ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ.

## ಶ್ರೀ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತು ಮೂಡುಬಿದಿರೆ
## ಆಟಿದ ಕೂಟ ಮತ್ತು ಸನ್ಮಾನ



ಪುತ್ತೂರಿನ ಜನಪ್ರಿಯ ನ್ಯಾಯವಾದಿಯೂ, ಪುತ್ತೂರು ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಆಡಳಿತ ಮೊಕ್ತೇಸರರಾಗಿಯೂ ದುಡಿದು, ಇದೀಗ ಕರ್ನಾಟಕ ರಾಜ್ಯ ಧಾರ್ಮಿಕ ಪರಿಷತ್‌ನ ಸದಸ್ಯರಾಗಿ ಆಯ್ಕೆಗೊಂಡ ಶ್ರೀ ಯನ್.ಕೆ.ಜಗನ್ನಿವಾಸ ರಾಯರಿಗೆ ಅಭಿನಂದನಾ ಕಾರ್ಯಕ್ರಮವು ಸಂಘದ ವತಿಯಿಂದ ನಡೆಯಿತು. ತಾ.16-08-2015ನೇ ರವಿವಾರ ಸಂಘದ ಗೌರವಾಧ್ಯಕ್ಷರಾದ ಬಿ.ಕೃಷ್ಣರಾಜ ರಾಯರ ಮನೆಯಲ್ಲಿ ಜರಗಿದ ಆಟಿದ ಕೂಟ ಸಮಾರಂಭದಲ್ಲಿ ಈ ಕಾರ್ಯಕ್ರಮ ನೆರವೇರಿತು.

ಹಿರಿಯರಾದ ಶ್ರೀ ಬಿ.ಮೋಹನ್ ರಾಯರು ಹಾಗೂ ಪುತ್ತಿಗೆ ಬಾಲಕೃಷ್ಣ ರಾಯರು ದೀಪ ಬೆಳಗಿಸುವ ಮೂಲಕ ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರೂ ಹಾಗೂ ಕರ್ನಾಟಕ ಬ್ಯಾಂಕ್‌ನ ಜನರಲ್ ಮೆನೇಜರ್ ಆಗಿರುವ ಶ್ರೀ ಬಿ. ಚಂದ್ರಶೇಖರರಾಯರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಯಕ್ಷದೇವ ಮಿತ್ರ ಮಂಡಳಿ ಬೆಳ್ವಾಯಿ ಇದರ ಅಧ್ಯಕ್ಷರಾಗಿರುವ ಶ್ರೀ ದೇವಾನಂದ ಭಟ್ ಮತ್ತು ಮೂಡುಬಿದಿರೆ ಆಳ್ವಾಸ್ ಕಾಲೇಜಿನ ಉಪನ್ಯಾಸಕರಾಗಿರುವ ಶ್ರೀ ಬಿ.ಕೆ.ವಸಂತರಾಜರವರು ಆಗಮಿಸಿದ್ದರು. ಸಂಘದ ಗೌರವಾಧ್ಯಕ್ಷರಾದ ಶ್ರೀ ಬಿ.ಕೃಷ್ಣರಾಜ ರಾಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕರ್ನಾಟಕ ರಾಜ್ಯ ಧಾರ್ಮಿಕ ಪರಿಷತ್ತು ಸದಸ್ಯರಾಗಿ ಆಯ್ಕೆಗೊಂಡ ಪುತ್ತೂರಿನ ಶ್ರೀ ಯನ್.ಕೆ.ಜಗನ್ನಿವಾಸ ರಾಯರಿಗೆ ಸಂಘದ ಅಧ್ಯಕ್ಷರಾದ ಶ್ರೀ ಬಿ.ಚಂದ್ರಶೇಖರ ರಾಯರು ಫಲವಸ್ತು ಸ್ಮರಣಿಕೆಯನ್ನು ನೀಡಿ, ಹಾರ ಹಾಕಿ, ಶಾಲು ಹೊದಿಸಿ ಸನ್ಮಾನಿಸಿದರು. ಸನ್ಮಾನಗೊಂಡ ಶ್ರೀ ಯನ್.ಕೆ.ಜಗನ್ನಿವಾಸ ರಾಯರು ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ದೇವಸ್ಥಾನಗಳ ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸುವುದಾಗಿ ಘೋಷಿಸಿದರು. ಕು। ಶುಭಾಂಜನ ಇವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭಗೊಂಡಿತು.

ಸಂಘದ ಕಾರ್ಯದರ್ಶಿ ಯಂ.ಜಗಧೀಶ ರಾಯರು ಅಧ್ಯಕ್ಷರನ್ನು, ಸನ್ಮಾನಿತರನ್ನು, ಅತಿಥಿಗಳನ್ನು ಹಾಗೂ ಗೌರವಾಧ್ಯಕ್ಷರನ್ನು ಸ್ವಾಗತಿಸಿದರು. ಶ್ರೀ ದೇವಾನಂದ ಭಟ್‌ರವರು ಸನ್ಮಾನಿತರ ಪರಿಚಯ ಮಾಡಿದರು. ಬಿ.ಕೆ.ವಸಂತ ರಾಜರು ‘ಆಟಿದ ಕೂಟ’ದ ಬಗ್ಗೆ ವಿವರಿಸಿದರು. ಅಧ್ಯಕ್ಷಸ್ಥಾನದಿಂದ ಮಾತನಾಡಿದ ಸಂಘದ ಅಧ್ಯಕ್ಷ ಬಿ.ಚಂದ್ರಶೇಖರ ರಾಯರು ಅತ್ಯುನ್ನತ ಹುದ್ದೆಯಲ್ಲಿರುವವರು ಮಾತು ಮತ್ತು ಕೃತಿಗಳಲ್ಲಿ ಜಾಗೃತೆಯಿಂದ ವ್ಯವಹರಿಸಬೇಕೆಂದೂ, ತಪ್ಪಿದರೆ ಅಪಾಯ ಕಟ್ಟಿಟ್ಟ ಬುತ್ತಿ ಎಂದು ಕಿವಿಮಾತು ಹೇಳಿದರು.

ಸಂಘದ ಗೌರವಾಧ್ಯಕ್ಷ ಶ್ರೀ ಬಿ.ಕೃಷ್ಣರಾಜ ರಾಯರು ಸಂಘದ ಪ್ರಗತಿಗೆ ಸದಸ್ಯರೆಲ್ಲರೂ ಸಹಕರಿಸಬೇಕೆಂದು ವಿನಂತಿಸಿಕೊಂಡರು. ಸಂಘದ ಜತೆ ಕಾರ್ಯದರ್ಶಿ ಹಾಗೂ ಶ್ರೀ ಕೃಷ್ಣ ಫ್ರೆಂಡ್ಸ್ ಸರ್ಕಲ್ ಮೂಡುಬಿದಿರೆ ಇದರ ಅಧ್ಯಕ್ಷರಾದ ಶ್ರೀ ಬಿ.ಗಣೇಶ ರಾಯರು ಧನ್ಯವಾದವನ್ನು ಸಮರ್ಪಿಸಿದರು. ಸಂಘದ ಸಂಘಟನಾ ಕಾರ್ಯದರ್ಶಿ ಶ್ರೀ ರಾಯಿ ರಾಜಕುಮಾರ್‌ರವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು.

ಭೋಜನದ ನಂತರ ಮಕ್ಕಳಿಗೆ, ಪುರುಷರಿಗೆ ಹಾಗೂ ಮಹಿಳೆಯರಿಗೆ ವಿವಿಧ ಸ್ಪರ್ಧೆಗಳು ಮತ್ತು ರಸಪ್ರಶ್ನೆ ಕಾರ್ಯಕ್ರಮ ಜರಗಿತು. ಸಂಘದ ಸಾಂಸ್ಕೃತಿಕ ಕಾರ್ಯದರ್ಶಿ ಶ್ರೀ ಬಿ. ಜಯರಾಮ ರಾಯರು ಇದರ ನೇತೃತ್ವವನ್ನು ವಹಿಸಿದ್ದರು. ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ವೀಣಾ ದೇವಾನಂದ ವಹಿಸಿದ್ದರು. ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ನೀಡಲಾಯಿತು. ಮಹಿಳಾ ವೇದಿಕೆಯ ಕಾರ್ಯದರ್ಶಿ ಶ್ರೀಮತಿ ಜ್ಯೋತಿ ಜಯರಾಮ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಲಘು ಉಪಹಾರದೊಂದಿಗೆ ಕಾರ್ಯಕ್ರಮವು ಸಂಪನ್ನಗೊಂಡಿತು.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿಯಿಂದ ಶೃಂಗೇರಿ ಭೇಟಿ



ಶ್ರೀ ಶಾರದಾ ಪತ್ರಿಕೆಯಲ್ಲಿ ಕೊಟ್ಟಿದ್ದ ಪ್ರಕಟಣೆಯಂತೆ ತಾ.13-09-2015ರ ಆದಿತ್ಯವಾರದಂದು ಸಂಘದ ವತಿಯಿಂದ ಶೃಂಗೇರಿ ಭೇಟಿಯನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಉಸ್ತುವಾರಿಯನ್ನು ಯುವ ವೇದಿಕೆ ಹಾಗೂ ಮಹಿಳಾವೇದಿಕೆಯವರು ವಹಿಸಿಕೊಂಡಿದ್ದರು. ಅಂದು ಬೆಳಿಗ್ಗೆ ಆರು ಗಂಟೆಗೆ ಶ್ರೀ ಶಾರದಾ ಮಂಟಪದ ಆವರಣದಲ್ಲಿ ಸುಮಾರು 130 ಜನರು ಈ ಪ್ರವಾಸಕ್ಕಾಗಿ ನೆರೆದಿದ್ದರು. ಅಧಿಕ ಸಂಖ್ಯೆಯಲ್ಲಿ ಮಕ್ಕಳು ಆಗಮಿಸಿದ್ದುದು ಈ ಬಾರಿಯ ವಿಶೇಷ. ಎಲ್ಲರೂ ಚಹಾ ಸೇವಿಸಿ ತಮಗಾಗಿ ಕಾದಿದ್ದ ಮೂರು ಬಸ್ಸುಗಳನ್ನು ಏರಿ ಪ್ರಯಾಣ ಆರಂಭಿಸಿದರು. ಇನ್ನು ಕೆಲವರು ತಮ್ಮ ಖಾಸಗಿ ವಾಹನದಲ್ಲಿ ಹಿಂಬಾಲಿಸಿದರು. ಶ್ರೀ ಅಜಿತ್ ರಾವ್, ಶ್ರೀ ಕೊಕ್ರಾಡಿ ಸುರೇಶ ರಾವ್, ಶ್ರೀ ಸುಧಾಕರ್ ರಾವ್‌ರವರು ಒಂದೊಂದು ಬಸ್ಸಿನ ನೇತೃತ್ವ ವಹಿಸಿದ್ದರು. ಒಂದು ಗಂಟೆಯ ಪ್ರಯಾಣದ ಬಳಿಕ ಹೆಬ್ರಿಯಲ್ಲಿ ಬೆಳಗ್ಗಿನ ಉಪಾಹಾರಕ್ಕಾಗಿ ಬಸ್ಸನ್ನು ನಿಲ್ಲಿಸಲಾಯಿತು. ಇಡ್ಲಿ ವಡಾ, ಖಾರಬಾತು, ಶೀರಾ, ಚಹಾ ಸೇವನೆಯ ಬಳಿಕ ಪ್ರಯಾಣ ಪುನಃ ಆರಂಭವಾಯಿತು. ತುಂತುರು ಮಳೆಯೊಂದಿಗೆ ನಮ್ಮನ್ನು ಮಲೆನಾಡು ಸ್ವಾಗತಿಸಿತು. ಅಂತ್ಯಾಕ್ಷರಿ ಹಾಸ್ಯ ಚಟಾಕಿಗಳ ಮಧ್ಯೆ ಬಸ್ಸು ಆಗುಂಬೆ ಘಾಟಿಯನ್ನೇರಿದ್ದು ತಿಳಿಯಲೇ ಇಲ್ಲ.ರಸ್ತೆಯೂ ಉತ್ತಮವಾಗಿದ್ದುದರಿಂದ ಪ್ರಯಾಣವೂ ಸುಖಕರವಾಗಿತ್ತು. ಸುಮಾರು ಹತ್ತುಗಂಟೆಯ ಹೊತ್ತಿಗೆ ಶೃಂಗೇರಿ ತಲುಪಿದೆವು. ಅಲ್ಲಿ ನಮಗಾಗಿ ಶ್ರೀ ಕ್ಷೇತ್ರದ ಛತ್ರದಲ್ಲಿ ರೂಮುಗಳ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿ ಕೈಕಾಲು ತೊಳೆದು ಬಟ್ಟೆ ಬದಲಾಯಿಸಿ ದೇವಸ್ಥಾನದ ಕಡೆ ಹೊರಟೆವು. ಶ್ರೀ ಸಂಸ್ಥಾನದ ಹೊಸದಾಗಿ ಕಟ್ಟಿದ ಗಗನಚುಂಬಿ ಸ್ವಾಗತ ಗೋಪುರ ಕಣ್ಮನ ಸೆಳೆಯುತ್ತಿತ್ತು. ಶ್ರೀ ಶಾರದಾ ದೇವಸ್ಥಾನವನ್ನು ಪ್ರವೇಶಿಸಿ ಪೂಜೆ ಸಲ್ಲಿಸಿ ಗಣಪತಿ ಹಾಗೂ ಶ್ರೀ ಆದಿಶಂಕರರ ಗುಡಿಯನ್ನು ಸಂದರ್ಶಿಸಿ ತೀರ್ಥಪ್ರಸಾದ ಪಡೆದೆವು. ನಂತರ ಹನ್ನೆರಡನೆಯ ಶತಮಾನದ ವಿದ್ಯಾಶಂಕರ ದೇವಾಲಯಕ್ಕೆ ಸುತ್ತುಹಾಕಿ ದೇವರಿಗೆ ನಮಿಸಿ ನದೀ ತೀರದ ಬಳಿಗೆ ತೆರಳಿದೆವು.ಅಲ್ಲಿನ ದೊಡ್ಡ ಗಾತ್ರದ ಮೀನುಗಳನ್ನು ನೋಡಿ ಮಕ್ಕಳು ಬೆರಗಾದರು. ಅಲ್ಲಿಯೇ ಇರುವ ಬಿಸಿಲ ಬೇಗೆಯಿಂದ ವೇದನೆಯಲ್ಲಿದ್ದ ಕಪ್ಪೆಗೆ ಸರ್ಪವು ಹೆಡೆಯೆತ್ತಿ ಆಶ್ರಯ ನೀಡಿದ ಸ್ಥಳಕ್ಕೂ ಭೇಟಿ ನೀಡಿದೆವು. ನಂತರ ಸೇತುವೆ ದಾಟುತ್ತಾ ಶೃಂಗೇರಿಯ ನಿಸರ್ಗ ಸೌಂದರ್ಯವನ್ನು ಆಹ್ಲಾದಿಸುತ್ತ ನರಸಿಂಹವನಕ್ಕೆ ತೆರಳಿದೆವು. ನರಸಿಂಹವನದಲ್ಲಿರುವ ಶೃಂಗೇರಿ ಸಂಸ್ಥಾನದ ಹಿಂದಿನ ಜಗದ್ಗುರುಗಳ ಬೃಂದಾವನಗಳಿಗೆ ನಮಿಸಿ ಗುರುಭವನದಲ್ಲಿ ಗುರುಗಳನ್ನು ಭೇಟಿಯಾಗಿ ಆಶೀರ್ವಾದ ಪಡೆಯಲು ಹೊರಟೆವು. ಗುರುಗಳು ತಮ್ಮ ಶಿಷ್ಯರೊಂದಿಗೆ ಆವಾಗಲೆ ಭೇಟಿ ನೀಡಲು ಆರಂಭಿಸಿಯಾಗಿತ್ತು. ವಿಶಾಲವಾದ ಸಭಾಂಗಣದಲ್ಲಿ ದೊಡ್ಡವೇದಿಕೆಯ ಇಕ್ಕೆಲಗಳಲ್ಲಿ ಶ್ರೀ ಶ್ರೀ ಗಳಿಬ್ಬರು ಬೆಳ್ಳಿಯ ಸಿಂಹಾಸನದಲ್ಲಿ ಆಸೀನರಾಗಿದ್ದು, ಶ್ರೀಶಾರದಾ ಚಂದ್ರಮೌಳೀಶ್ವರ ದೇವರು ದೊಡ್ಡ ಚಿನ್ನದ ಮಂಟಪದಲ್ಲಿ ವೇದಿಕೆಯ ಮಧ್ಯದಲ್ಲಿ ವಿರಾಜಮಾನರಾಗಿದ್ದ ದೃಶ್ಯ ನಯನ ಮನೋಹರವಾಗಿದ್ದು ಭಕ್ತಿಭಾವ ಸ್ಫುರಿಸುವಂತಿತ್ತು. ಆಗಾಗಲೇ ಸಾವಿರಾರು ಜನ ಸಮಾಜಭಾಂಧವರು ನೆರೆದಿದ್ದು ಕೆಲವರು ಪಾದಪೂಜೆ ಭಿಕ್ಷಾವಂದನೆಗಳಲ್ಲಿ ನಿರತರಾಗಿದ್ದರು. ಅಲ್ಲಿ ಮುಂಬಯಿ ಬೆಂಗಳೂರು ಮೈಸೂರುಗಳಿಂದ ಬಂದಿದ್ದ ಅನೇಕ ಬಂಧುಮಿತ್ರರು ಭೇಟಿಯಾದರು ಹಾಗೂ ಅನೇಕ ಹೊಸಮಿತ್ರರನ್ನೂ ಪರಿಚಯಿಸಿಕೊಂಡೆವು. ಸರತಿಯ ಸಾಲಿನಲ್ಲಿ ನಿಂತು ಗುರುಗಳನ್ನು ಭೇಟಿಮಾಡಿ ಆಶೀರ್ವಾದ ಪಡೆದೆವು. ನಂತರ ಶ್ರೀ ಶಾರದಾ ಚಂದ್ರಮೌಳೀಶ್ವರ ದೇವರಿಗೆ ಮಹಾಪೂಜೆಯಾಯಿತು. ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರು ಸಭಾಂಗಣದಲ್ಲಿ ಕಿಕ್ಕಿರಿದು ನೆರೆದಿದ್ದರೂ ಶಿಸ್ತಿನಲ್ಲಿ ಕುಳಿತು ಮೌನವಾಗಿ ಕಾಯುತ್ತಿದ್ದ ಸಮಾಜಬಾಂಧವರನ್ನು ನನ್ನ ಅತ್ಯಂತ ಪ್ರೀತಿಯ ಶಿಷ್ಯರಾದ ಸ್ಥಾನಿಕ ಬ್ರಾಹ್ಮಣ ಬಾಂಧವರೇ ಎಂದು ಆಶೀರ್ವಚನವನ್ನು ಆರಂಭಿಸಿದಾಗ ರೋಮಾಂಚನವಾಯಿತು. ಆಶೀರ್ವಚನದ ನಂತರ ಕಿರಿಯ ಶ್ರೀ ಶ್ರೀಗಳಿಂದ ಮಂತ್ರಾಕ್ಷತೆ ಪಡೆದೆವು. ಮಹಿಳೆಯರಿಗೆ ವಿಶೇಷವಾಗಿ ಅರಶಿನ ಕುಂಕುಮ ಹಾಗೂ ಸೀರೆಯನ್ನು ಪ್ರಸಾದವಾಗಿ ನೀಡಿ ಆಶೀರ್ವದಿಸಿದರು. ನಂತರ ಹಿಂದಿರುಗಿ ಸೇತುವೆ ದಾಟಿ ಶಾರದಾ ದೇವಸ್ಥಾನದ ಹಿಂದಿರುವ ಭೋಜನಗೃಹಕ್ಕೆ ತೆರಳಿದೆವು.

ಅಲ್ಲಿ ನಮಗಾಗಿ ಎರಡು ಹಾಲ್‌ನಲ್ಲಿ ಬಾಳೆ ಎಲೆ ಹಾಕಿ ಭೋಜನಕ್ಕೆ ತಯಾರಿ ಮಾಡಲಾಗಿತ್ತು. ಸಾರನ್ನ, ಪಾಯಸ, ಫ್ರುಟ್‌ಸಲಾಡ್, ಸಿಹಿ ಸವಿದು ಭೋಜನ ಮುಗಿಸಿದೆವು. ನಂತರ ಛತ್ರಕ್ಕೆ ತೆರಳಿ ಸುಧಾರಿಸಿಕೊಂಡು ಮರುಪ್ರಯಾಣವನ್ನಾರಂಭಿಸಿದೆವು. ಪುನಃ ಹೆಬ್ರಿಯಲ್ಲಿ ಸಣ್ಣ ಚಹಾವಿರಾಮದ ನಂತರ ಮರಳಿ ಬಸ್ಸನ್ನೇರಿ ಉಡುಪಿಗೆ ಆರು ಗಂಟೆಗೆ ತಲುಪಿದೆವು. ಶ್ರೀ ಕರಂಬಳ್ಳಿ ವಸಂತರಾವ್, ಶ್ರೀ ಉಂಡಾರು ಕೃಷ್ಣಾನಂದ ರಾವ್, ಶ್ರೀ ವೈ.ವಿಠಲ್ ರಾವ್, ಶ್ರೀ ಕೆ. ಸುರೇಶ ರಾವ್, ಶ್ರೀ ವೈ. ಭುವನೇಂದ್ರ ರಾವ್‌ರವರುಗಳು ಮುತುವರ್ಜಿ ವಹಿಸಿ ಏರ್ಪಾಡು ಮಾಡಿದ ಗುರುಗಳ ಭೇಟಿ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿತ್ತು. ಅವರಿಗೆ ನಮ್ಮೆಲ್ಲರ ಹಾರ್ದಿಕ ಅಭಿನಂದನೆಗಳು.

**-ಯುವವೇದಿಕೆಯ ಕಾರ್ಯಕರ್ತರು**

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಅಷ್ಟಮಿ ಆಚರಣೆ



ಶ್ರೀಸುಬ್ರಹ್ಮಣ್ಯ ಸಭಾದಲ್ಲಿ ತಾ.6-9-15ನೇ ಆದಿತ್ಯವಾರದಂದು ಶ್ರೀ ಕೃಷ್ಣ ಜನ್ಮಾಷ್ಟಮಿ ಯನ್ನು ಸಮಾಜ ಬಾಂಧವರೊಡಗೂಡಿ ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಯಿತು. ಬೆಳಗ್ಗೆ 9-00 ಘಂಟೆಗೆ ಸಾಮೂಹಿಕ ಶ್ರೀ ವಿಷ್ಣುಸಹಸ್ರನಾಮ ಪಾರಾಯಣದಿಂದ ಮೊದಲ್ಗೊಂಡು ಭಗವದ್ಗೀತೆ ಕಂಠಪಾಠ ಸ್ಪರ್ಧೆ ಆಯೋಜಿಸಲಾಗಿತ್ತು. ಆ ದಿನದ ಅತ್ಯಂತ ಮನಮೋಹಕ ಮತ್ತು ಆಕರ್ಷಣೀಯವಾದ ವಿಷಯ ಮುದ್ದು ಕೃಷ್ಣವೇಷ ಸ್ಪರ್ಧೆ. ಬಹುಶ: ಬಹುತೇಕ ಎಲ್ಲಾ ತಂದೆ ತಾಯಿಗಳಿಗೂ ತಮ್ಮ ಮಗುವನ್ನು ಮುದ್ದುಕೃಷ್ಣನಾಗಿ ಭಗವಂತನ ಅವತಾರದಲ್ಲಿ ಕಾಣಬೇಕೆಂಬ ಇಚ್ಛೆ ಉತ್ಕೃಷ್ಟವಾಗಿರುತ್ತದೆ. ಅಂತೆಯೇ 8 ತಿಂಗಳ ಮಗುನಿಂದ 12 ವರ್ಷದ ಮಕ್ಕಳ ಕೃಷ್ಣವೇಷ ಸ್ಪರ್ಧೆ ಸಮಾಜ ಬಾಂಧವರ ಕಣ್ ಮನ ತಣಿಸಿತ್ತು. ಯಕ್ಷಗಾನದಲ್ಲಿ ಹೇಳುವಂತೆ ನೆತ್ತಿಯಲ್ಲಿ ಜುಟ್ಟು, ಹಣೆಯಲ್ಲಿ ತಿಲಕದ ಬೊಟ್ಟು ಕೊರಳಲ್ಲಿ ಮುತ್ತಿನ ಹಾರ, ಉಟ್ಟಿದ್ದು ಪೀತಾಂಬರ, ಕೈಯಲ್ಲಿ ಕೊಳಲಿನ ನಾದ, ಕಾಲಿನಲ್ಲಿ ರಿಂಗಣಿಸುವ ಗೆಜ್ಜೆಯ ನಿನಾದ ಅಂಬೆಗಾಲಿಕ್ಕಿ ಬಂದ ಮುದ್ದುಕೃಷ್ಣ, ಕಿಶೋರ ಕೃಷ್ಣ, ರಾಧಾಕೃಷ್ಣ, ಯಶೋಧೆ ಕೃಷ್ಣ ಹೀಗೆ ಹತ್ತು ಹಲವಾರು ಭಗವಂತನ ಅವತಾರಗಳೇ ಮೇಳೈಸಿದ್ದವು. ಇದಾದ ನಂತರ ಭಕ್ತಿಗೀತೆಯ ಸ್ಪರ್ಧೆ ನಡೆಯಿತು. ದಾಸವರೇಣ್ಯರಿಂದ ರಚಿತವಾದ ಹರಿನಾಮ ಸಂಕೀರ್ತನೆಯು ಭಕ್ತಿಭಾವದಿಂದ ಕೂಡಿದ್ದು ಕೇಳುಗರಿಗೆ ಕರ್ಣಾನಂದವಾಯಿತು. ಈ ನಡುವೆ ಮಡಕೆ ಒಡೆಯುವ ಸ್ಪರ್ಧೆಯನ್ನು ಶ್ರೀ ಸಭಾದ ಹೊರಾಂಗಣದಲ್ಲಿ ಏರ್ಪಡಿಸಿದ್ದು ಉತ್ಸಾಹಿ ತರುಣ-ತರುಣಿಯರು, ಮಕ್ಕಳು ಅನೇಕ ಸಂಖ್ಯೆಯಲ್ಲಿ ಸ್ಪರ್ಧಿಸಿದರು. ಭೋಜನದ ನಂತರ ಕು। ವಂದನಾ ರಾವ್‌ರವರ ಪ್ರಾರ್ಥನೆಯ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭಗೊಂಡಿತು. ಶ್ರೀಯುತ ಸುರೇಶ್ ರಾವ್ ಕಡಬರವರು ಭಗವಾನ್ ಶ್ರೀ ಕೃಷ್ಣನ ಬಗ್ಗೆ ರಸಪ್ರಶ್ನೆಯನ್ನು ನಡೆಸಿಕೊಟ್ಟರು. ಅವರೊಂದಿಗೆ ಶ್ರೀ ಸಂಜಯ ರಾವ್ ಪಿ. ಸಹಕರಿಸಿದರು. ಶ್ರೀಯುತ ಸದಾಶಿವ ಶಾಸ್ತ್ರಿಯವರು ತಾವು ಕಂಡು ಕೇಳಿದ ಅನೇಕ ವಿಷಯಗಳನ್ನು ಹಾಸ್ಯಭರಿತ ಮಾತುಗಳಿಂದ ವರ್ಣಿಸಿ ಪ್ರೇಕ್ಷಕರ ಮನಸೂರೆಗೊಂಡರು. ಬಳಿಕ ಸಮಾಜದ ಉದಯೋನ್ಮುಖ ಪ್ರತಿಭೆಗಳಿಂದ ಹಲವು ಪ್ರಕಾರಗಳ ನೃತ್ಯಗಳು ವಿಜೃಂಭಿಸಿದವು. ಸುಬ್ರಹ್ಮಣ್ಯ ಸಭಾದ ಮಹಿಳಾ ವಿಭಾಗ, ಮಕ್ಕಳ ವಿಭಾಗ, ಪುರುಷರ ವಿಭಾಗದಲ್ಲಿ ಸುಮಾರು ಒಂದು ಗಂಟೆ ಕಾಲ ಅಮೋಘ ನೃತ್ಯಗಳನ್ನು ಪ್ರದರ್ಶಿಸಿದರು. ಬಹುತೇಕ ನೃತ್ಯಗಳನ್ನು ಶ್ರೀಮತಿ ಅನುರಾಧಾ ಕಿಶೋರ್ ರಾವ್‌ರವರು ಸಂಯೋಜಿಸಿ ನಿರ್ದೇಶಿಸಿದ್ದರು. ಭಾಗವಹಿಸಿದ ಎಲ್ಲಾ ಸ್ಪರ್ಧಿಗಳಿಗೆ ಹಾಗೂ ಮುದ್ದುಕೃಷ್ಣ ವೇಷ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ಪುಟಾಣಿಗಳಿಗೆ ಶ್ರೀಯುತ ಸದಾಶಿವ ಶಾಸ್ತ್ರಿಯವರು ನಗದು ಬಹುಮಾನ ನೀಡಿದರು. ವಿವಿಧ ಸ್ಪರ್ಧೆಯಲ್ಲಿ ಭಾಗವಹಿಸಿದ ವಿಜೇತರಾದವರಿಗೆ ಬಹುಮಾನ ವಿತರಣೆಯನ್ನು ಮಾಡಲಾಯಿತು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಯುತ ಪಿ. ಶ್ರೀಕಾಂತ್ ರಾವ್ ನಿರ್ವಹಿಸಿದರು. ಈ ಎಲ್ಲಾ ಕಾರ್ಯಕ್ರಮಗಳಿಗೆ ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಶೈಲಜಾ ಶ್ರೀಕಾಂತ್, ಶ್ರೀಮತಿ ಅರುಣಾ ಸೋಮಶೇಖರ್ ಹಾಗೂ ಶ್ರೀಮತಿ ಕುಸುಮಾ ನವೀನ್ ರಾವ್ ಸಹಕರಿಸಿದರು.

## ಶ್ರೀ ಎಂ.ಪ್ರಸಾದ್‌ರವರಿಗೆ ಡಾಕ್ಟರೇಟ್ ಪದವಿ



ದಾವಣಗೆರೆಯ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಂ.ಸಿ.ಎ. ವಿಭಾಗದಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎಂ.ಪ್ರಸಾದ್ ಇವರು ಕಂಪ್ಯೂಟರ್ ಸೈನ್ಸ್‌ನಲ್ಲಿ JNNCE Collegeನ ಪ್ರೊಫೆಸರ್ ಹಾಗೂ ಡೈರೆಕ್ಟರ್ NES Research ಫೌಂಡೇಶನ್ ಡಾ। ಅಜಿತ್ ದಂತಿ ಇವರ ಮಾರ್ಗದರ್ಶನದಲ್ಲಿ A study on Human Facial Expressions and Mood Analysis, Based on Digital image processing Techniques ಎಂಬ ವಿಷಯದ ಮೇಲೆ ಮಂಡಿಸಿದ ಮಹಾಪ್ರಬಂಧಕ್ಕೆ ಕುವೆಂಪು ಯುನಿರ್ವಸಿಟಿಯಿಂದ ಡಾಕ್ಟರೇಟ್ ಪದವಿ ಪಡೆದಿರುತ್ತಾರೆ.

ಇವರು ಶ್ರೀ ಮಾರ್ಪಳ್ಳಿ ಆರ್.ಮಂಜುನಾಥ್ ಮತ್ತು ಶ್ರೀಮತಿ ಮಂಜುಳಾ ಇವರ ಹಿರಿಯ ಪುತ್ರ ಹಾಗೂ ಮಾರ್ಪಳ್ಳಿಯ ರಾಮರಾವ್ ಮತ್ತು ಸರಸ್ವತಮ್ಮ ಹಾಗೂ ಪಡುಬಿದ್ರಿಯ ದೇವರಾಯ ಹಾಗೂ ಸರಸ್ವತಮ್ಮರವರ ಮೊಮ್ಮಗನಾಗಿರುತ್ತಾರೆ. ಇವರಿಗೆ ಶಾರದಾ ಬಳಗದ ಶುಭಾಶಯಗಳು.

## ಚಿಣ್ಣರ ಅಂಗಳ



ಅನಘಾ, 5ನೇ ತರಗತಿ, ಬಿ.ಜಿ.ಎಸ್.ನ್ಯಾಶನಲ್ ಪಬ್ಲಿಕ್ ಸ್ಕೂಲ್, ಬೆಂಗಳೂರು




ಬಿ.ಕೆ.ಪ್ರದ್ಯುಮ್ನ ರಾವ್, 6-ಎ, ಸೈಂಟ್‌ಮೇರಿಸ್ ಸ್ಕೂಲ್, ಲಾಯಿಲ, ಬೆಳ್ತಂಗಡಿ



ಎ.ಪಲ್ಲವಿ ರಾವ್, 6ನೇ ತರಗತಿ, ಸೈಂಟ್ ಸಿಸಿಲಿ ಆಂಗ್ಲ ಮಾಧ್ಯಮ ಶಾಲೆ, ಉಡುಪಿ



ಆದಿತ್ಯ, 6ನೇ ತರಗತಿ, ಅನಂತೇಶ್ವರ ಹಿ.ಪ್ರಾ.ಶಾಲೆ

Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@gmail.com Website : www.srisharada.org